# ಕೆಲವು ರಾಜಕೀಯ ಬೆಳವಣಿಗೆಗಳ ಕುರಿತ ವರದಿ

(ಅಕ್ಟೋಬರ್ 29–31, 2022 ರಂದು ನಡೆದ ಕೇಂದ್ರ ಸಮಿತಿ ಸಭೆಯಲ್ಲಿ ಅಂಗೀಕರಿಸಿದ್ದು)

## ಅಂತರ್ರಾಷ್ಟ್ರೀಯ ಬೆಳವಣಿಗೆಗಳು

ಜುಲೈ 2022 ರಲ್ಲಿ ನಡೆದ ಕಳೆದ ಕೇಂದ್ರ ಸಮಿತಿ ಸಭೆಯ ನಂತರದ ಕೆಲವು ಪ್ರಮುಖ ಬೆಳವಣಿಗೆಗಳನ್ನು ಈ ವರದಿಯಲ್ಲಿ ಒಳಗೊಳ್ಳಲಾಗಿದೆ.

### ಜಾಗತಿಕ ಆರ್ಥಿಕ ಬಿಕ್ಕಟ್ಟು

ಜಾಗತಿಕ ಆರ್ಥಿಕ ಬಿಕ್ಕಟ್ಟು ಉಲ್ಬಣಿಸುತ್ತಿದೆ. ಐಎಂಎಫ್ ನ ವಿಶ್ವ ಆರ್ಥಿಕ ಕಣ್ಣೋಟ (ವರ್ಲ್ಡ್ ಎಕಾನಮಿಕ್ ಔಟ್‌ಲುಕ್) 2022 ರ ಪ್ರಕಾರ: ಜಾಗತಿಕ ಅಭಿವೃದ್ಧಿಯು ನಿಧಾನಗೊಳ್ಳುತ್ತಿದ್ದು 2021 ರ ಶೇ. 6.0 ರಿಂದ 2022 ರ ಶೇ.3.2 ಕ್ಕೆ ಇಳಿದದ್ದು 2023 ರಲ್ಲಿ ಶೇ.2.7 ಕ್ಕೆ ಇಳಿಯಬಹುದೆಂದು ಊಹಿಸಲಾಗಿದೆ. ಇದು 2001 ರ ನಂತರದ ಜಾಗತಿಕ ಹಣಕಾಸು ಬಿಕ್ಕಟ್ಟು ಮತ್ತು ಕೋವಿಡ್–19 ರೋಗದ ಅವಧಿಯ ತೀವ್ರ ಹಂತವನ್ನು ಹೊರತು ಪಡಿಸಿದ, ಅತ್ಯಂತ ದುರ್ಬಲ ಅಭಿವೃದ್ಧಿಯ ಚಿತ್ರಣವಾಗಿದೆ.

ಬ್ಲೂಂಬರ್ಗ್ ಎಕನಾಮಿಕ್ಸ್ ಮಾಡೆಲ್‌ನ ಇತ್ತೀಚಿನ ಅಂದಾಜು ಪ್ರಕಾರ ಅಕ್ಟೋಬರ್ 2023 ರ ಹೊತ್ತಿಗೆ ಅಮೆರಿಕಾದಲ್ಲಿ ಆರ್ಥಿಕ ಹಿಂಜರಿತದ ಶೇ.100 ರಷ್ಟು ಸಂಭವನೀಯತೆ ಇದೆ. ಶ್ರೀಮಂತ ದೇಶಗಳ ವರ್ತನೆಯಿಂದಾಗಿ ಕೋವಿಡ್–19 ರ ಅವಧಿಗಿಂತ ಹೆಚ್ಚು ಅಪಾಯಕಾರಿಯಾದ ಹಿಂಜರಿತದತ್ತ ಜಗತ್ತು ಸಾಗುತ್ತಿದೆ ಎಂದು ಅಕ್ಟೋಬರ್ 3 ರಂದು ವಿಶ್ವಸಂಸ್ಥೆ ಎಚ್ಚರಿಸಿದೆ. ಇದೇ ರೀತಿಯ ಅಂದಾಜನ್ನು ಒಇಸಿಡಿ (ದಿ ಆರ್ಗನೈಸೇಷನ್ ಫಾರ್ ಎಕನಾಮಿಕ್ ಕೋ ಆಪರೇಷನ್ ಅಂಡ್ ಡೆವಲಪ್‌ಮೆಂಟ್) ಕೂಡ ಮಾಡಿದೆ. ಈ ಗುಂಪು 2023 ರ ಜಾಗತಿಕ ಆರ್ಥಿಕ ಬೆಳವಣಿಗೆಯ ಅಂದಾಜನ್ನು ಶೇ.2.8 ರಿಂದ ಶೇ.2.2 ಕ್ಕೆ ಇಳಿಸಿದ್ದು, ಅದರಿಂದಾಗಿ ಜಾಗತಿಕ ಜಿಡಿಪಿಯಲ್ಲಿ ಸರಿಸುಮಾರು 2.8 ಟ್ರಿಲಿಯನ್ ಅಮೆರಿಕನ್ ಡಾಲರಿನಷ್ಟು ನಷ್ಟವಾಗಲಿದೆ.

ಆಹಾರ ಹಾಗೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಇದ್ದಕ್ಕಿದ್ದಂತೆ ಏರಿದ ಕಾರಣದಿಂದಾಗಿ ಜಗತ್ತಿನೆಲ್ಲೆಡೆಯ ಕೇಂದ್ರ ಬ್ಯಾಂಕುಗಳು ಬಡ್ಡಿ ದರಗಳನ್ನು ಏರಿಸಬೇಕಾದ ಒತ್ತಡಕ್ಕೆ ಸಿಲುಕಿದುವು. ಜಾಗತಿಕ ಹಣದುಬ್ಬರವು 2021 ರ ಶೇ.4.7 ರಿಂದ 2022 ರ ಶೇ.8.8 ಕ್ಕೆ ಏರಬಹುದೆಂದು ಅಂದಾಜು ಮಾಡಲಾಗಿದೆ. ಜತ್ತಿನ ಅತ್ಯಂತ ದೊಡ್ಡ ಆರ್ಥಿಕತೆಯನ್ನು ಹೊಂದಿರುವ ಅಮೆರಿಕಾವು ಮಾರ್ಚ್‌ನಲ್ಲಿ ಬಡ್ಡಿ ದರವನ್ನು ಏರಿಸಲು ಪ್ರಾರಂಭಿಸಿತು. 2022 ರಲ್ಲಿ ಅಮೆರಿಕದ ಫೆಡರಲ್ ಬ್ಯಾಂಕ್ ಬಡ್ಡಿ ದರವನ್ನು ಒಂದೇ ಬಾರಿಗೆ ಐದು ಪಟ್ಟು ಏರಿಸಿತು.

### ಯುಕ್ರೇನ್ ಯುದ್ಧ

ನಮ್ಮ 23 ನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಹೀಗೆ ಹೇಳಿತ್ತು: "ಯುಕ್ರೇನ್ ಯುದ್ಧವು ರಷ್ಯಾ ಮತ್ತು ಪಾಶ್ಚಾತ್ಯ ಮೈತ್ರಿಕೂಟ, ನ್ಯಾಟೋ (ದಿ ನಾರ್ಥ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಷನ್) ದ ನಡುವಿನ ಉರಿಬಿಂದುವಾಗಿ ಪರಿಣಮಿಸಿದೆ." ಇದು ಯುಕ್ರೇನ್ ಒಂದು ರಣರಂಗವಾಗಿ ರಷ್ಯಾ ಮತ್ತು ಅಮೆರಿಕ/ನ್ಯಾಟೋ ನಡುವಿನ ನಿಜವಾದ ಯುದ್ಧವಾಗಿದೆ ಎಂದು ನಾವು ಹೇಳಿದ್ದೆವು.

ಯುಕ್ರೇನಿನ ತಕ್ಷಣದ ಭದ್ರತೆ ಹಾಗೂ ಮಿಲಿಟರಿ ಅಗತ್ಯಗಳನ್ನು ಪೂರೈಸುವ ಸಲುವಾಗಿ, ಅಮೆರಿಕದ ರಕ್ಷಣಾ ಇಲಾಖೆಯು (ಡಿಒಡಿ) ಅಕ್ಟೋಬರ್ 14, 2022 ರಂದು 725 ಮಿಲಿಯನ್ ಡಾಲರಿನಷ್ಟು ಮೌಲ್ಯದ ಸುರಕ್ಷತಾ ಸಹಾಯವನ್ನು ಒದಗಿಸಲು ಅಧ್ಯಕ್ಷೀಯ ಮಂಡಳಿ (ಪ್ರಸಿಡೆನ್ಷಿಯಲ್ ಡ್ರಾಡೌನ್) ಗೆ ಅನುಮತಿ ನೀಡಿದೆ. ಆಗಸ್ಟ್ 2021 ರಿಂದ ಬಿಡೆನ್ ಆಡಳಿತವು ಯುಕ್ರೇನ್ ಯುದ್ಧಕ್ಕಾಗಿ ಡಿಒಡಿ ಉಗ್ರಾಣದಿಂದ ಒಟ್ಟು 23 ಉಪಕರಣಗಳನ್ನು ಹೊರತೆಗೆಯಲು ಅನುಮತಿ ನೀಡಿದೆ. ಬಿಡೆನ್ ಆಡಳಿತ ಆರಂಭವಾದಾಗಿನಿಂದ ಅಮೆರಿಕಾವು ಯುಕ್ರೇನಿಗೆ 18.3 ಮಿಲಿಯನ್ ಡಾಲರಿಗಿಂತಲೂ ಹೆಚ್ಚು ಮಿಲಿಟರಿ ಬೆಂಬಲವನ್ನು ಒದಗಿಸಿದೆ. ಅದಕ್ಕೂ ಮಿಗಿಲಾಗಿ, ಅಮೆರಿಕಾವು ತನ್ನ ನ್ಯಾಟೋ ಮೈತ್ರಿಕೂಟ ಮತ್ತಿತರ ಮಿತ್ರರಿಂದ ಯುಕ್ರೇನಿಗೆ ಹೆಚ್ಚಿನ ನೆರವನ್ನು ಕೊಡಮಾಡಿದೆ. ಅಣ್ವಸ್ತ್ರಗಳನ್ನು ಮತ್ತು 'ಕೊಳಕು ಬಾಂಬುಗಳನ್ನು' (ಡರ್ಟಿ ಬಾಂಬ್ಸ್) ಪ್ರಯೋಗಿಸುವ ಬೆದರಿಕೆಗಳು ಅಪಾಯಕಾರಿ ಪರಿಸ್ಥಿತಿಯನ್ನು ಸೃಷ್ಟಿಸಿದೆ.

### ದಿಗ್ಬಂಧನಗಳು ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಅವುಗಳ ಪರಿಣಾಮ

ಅಮೆರಿಕಾ, ಜಿ7 (ಏಳು ದೇಶಗಳ ಮೈತ್ರಿಕೂಟ) ಹಾಗೂ ಇಯು (ಯುರೋಪಿಯನ್ ಯೂನಿಯನ್) ರಷ್ಯಾದ ಮೇಲೆ ತೀವ್ರತರದ ದಿಗ್ಬಂಧನಗಳನ್ನು ವಿಧಿಸಿದವು. ಅದರ ಪರಿಣಾಮವಾಗಿ, ರಷ್ಯಾದ ಅಗತ್ಯ ಲೋಹಗಳು ಹಾಗೂ ಖನಿಜಗಳ ರಫ್ತುಗಳು ನಿಂತುಹೋಗಿವೆ, ಆಹಾರ, ನವೀಕರಿಸಲಾಗದ ಶಕ್ತಿಯ ಉಗಮಗಳು (ನಾನ್ ರಿನ್ಯೂಯಬಲ್ ಎನರ್ಜಿ) ಹಾಗೂ ಹಸಿರು ಶಕ್ತಿಗಳ (ಗ್ರೀನ್ ಎನರ್ಜಿ) ಪೂರೈಕೆಯಲ್ಲಿ ಕೊರತೆಯುಂಟಾಗಿದೆ, ಮತ್ತು ಹಣದುಬ್ಬರ ಹೆಚ್ಚಾಗುತ್ತಿದೆ. ಈ ಶಕ್ತಿಗಳ ಪೂರೈಕೆಯಲ್ಲಿ ರಷ್ಯಾವು ವಹಿಸುತ್ತಿರುವ ಪಾತ್ರವನ್ನು ಲೆಕ್ಕಹಾಕಿದರೆ ಜಗತ್ತಿನ ಆರ್ಥಿಕತೆಯು ಬಹಳ ಬೇಗ ಅತ್ಯಂತ ದೊಡ್ಡ ಶಕ್ತಿ ಪೂರೈಕೆಯ ಆಘಾತದಿಂದ ಸೊರಗಬಹುದು. ಹೆಚ್ಚುತ್ತಿರುವ ಹಣದುಬ್ಬರ ಹಾಗೂ ತೀವ್ರತರದ ಶಕ್ತಿಯ ಬಿಕ್ಕಟ್ಟಿನಿಂದಾಗಿ ಯುರೋಪಿಯನ್ ಯೂನಿಯನ್ ದೇಶಗಳು ಈ ಯುದ್ಧದಿಂದ ಅತಿ ಹೆಚ್ಚು ಆಘಾತವನ್ನು ಎದುರಿಸಬೇಕಾಗುತ್ತದೆ.

ರಷ್ಯಾದ ಮೇಲಿನ ತೈಲ ನಿರ್ಬಂಧದ ಪರಿಣಾಮಗಳು ಇಲ್ಲಿಯವರೆಗೆ ಸೀಮಿತವಾಗಿದೆ, ಆದರೆ ಅದೇ ಸಮಯದಲ್ಲಿ ಅದು ಜಾಗತಿಕ ಆರ್ಥಿಕತೆ ಹಾಗೂ ಹಲವಾರು ದೇಶಗಳ ಶಕ್ತಿ ಸುರಕ್ಷತೆಯನ್ನು ಗಳಿಸುವ ಸಾಮರ್ಥ್ಯಗಳ ಮೇಲೆ ಬೀರುವ ಪರಿಣಾಮಗಳು ತೀವ್ರತರದ್ದಾಗಿರುತ್ತದೆ.

### ನಾರ್ಡ್ ಸ್ಟ್ರೀಮ್ ಬೆಳವಣಿಗೆಗಳು

ರಷ್ಯಾದಿಂದ ಜರ್ಮನಿಗೆ ಬಾಲ್ಟಿಕ್ ಸಮುದ್ರದ ಅಡಿಯಲ್ಲಿ ಸಾಗುವ ನೈಸರ್ಗಿಕ ಅನಿಲದ ಪೈಪುಗಳ ಸ್ಫೋಟ ಹಾಗೂ ಅನಿಲ ಸೋರಿಕೆಯ ವಿಷಯದ ಬಗ್ಗೆ ಅದನ್ನು ಸ್ಫೋಟಿಸಿದ್ದು ಯಾರು ಎಂದು ತಿಳಿದಿದ್ದರೂ ಸಹ 'ಜರ್ಮನ್ ರಾಷ್ಟ್ರೀಯ ಸುಭದ್ರತೆ'ಯ ದೃಷ್ಟಿಯಿಂದ ಮಾತನಾಡಲಾಗದು ಎಂದು ಬರ್ಲಿನ್ ಹೇಳಿಕೊಂಡಿದೆ! ಸ್ವೀಡನ್ ಕೂಡ ತಾನು ಆ ಕುರಿತು ಸಂಗ್ರಹಿಸಿರುವ ದತ್ತಾಂಶಗಳನ್ನು ಯಾವ ದೇಶದ ಬಳಿಯೂ ಹಂಚಿಕೊಳ್ಳುವುದು ಬಹಳ ಸೂಕ್ಷ್ಮವಾದ ಸಂಗತಿ ಎಂದು ವಾದಿಸುತ್ತಿದೆ.

ಈ ಹಿನ್ನೆಲೆಯಲ್ಲಿ, 27.5 ಬಿಲಿಯನ್ ಕ್ಯುಬಿಕ್ ಮೀಟರುಗಳ ಅನಿಲವನ್ನು ಚಳಿಗಾಲದ ಸಮಯದಲ್ಲಿ ಯೂರೋಪಿಗೆ ಸಾಗಿಸಲು ಯಾವುದೇ ಹಾನಿಯಾಗಿರದ ನಾರ್ಡ್ ಸ್ಟ್ರೀಮ್ 2 ನ್ನು ಬಳಸಬಹುದೆಂಬ ರಷ್ಯಾದ ಪ್ರಸ್ತಾಪಕ್ಕೆ ಬರ್ಲಿನ್‌ನಿಂದ ಯಾವ ರೀತಿಯ ಸಕಾರಾತ್ಮಕ ಪ್ರತಿಕ್ರಿಯೆ ಬರದಿದ್ದಾಗ, ಟರ್ಕಿಗೆ ಹೊಸ ಅನಿಲ ಪೈಪ್ ಲೈನ್ ನಿರ್ಮಾಣ ಮಾಡಬಹುದು ಎಂದು ರಷ್ಯಾವು ಪ್ರಸ್ತಾಪ ಇಟ್ಟಿದೆ. ಇದು ಅಮೆರಿಕಾ ಮತ್ತದರ ಮಿತ್ರರನ್ನು ದಂಗುಬಡಿಸಿದೆ. ಹಲವಾರು ದೇಶಗಳ ಪ್ರತ್ಯೇಕ ಆರ್ಥಿಕ ವಲಯಗಳ (ಎಕ್ಸ್‌ಕ್ಲ್ಯೂಸಿವ್ ಎಕನಾಮಿಕ್ ಜೋನ್ಸ್) ಮೂಲಕ ಸಾಗುವ ನಾರ್ಡ್ ಸ್ಟ್ರೀಮ್‌ಗೆ ಇರುವ ಬೆದರಿಕೆಗಳನ್ನು ನಿರ್ಲಕ್ಷಿಸಲು ರಷ್ಯಾಕ್ಕೆ ಇದು ಸಹಾಯವಾಗುತ್ತದೆ.

ರಷ್ಯಾದ ಜಾಗತಿಕ ತೈಲ ರಫ್ತು ಈಗಲೂ ಉತ್ಕರ್ಷದಲ್ಲಿದೆ ಮತ್ತು ಇಯು ಈಗಲೂ ರಷ್ಯಾದ ಮೇಲೆ ಅವಲಂಬಿತವಾಗಿದೆ. ರಷ್ಯಾದ ಜಾಗತಿಕ ತೈಲ ರಫ್ತಿನ ಮೇಲಿನ ದಿಗ್ಬಂಧನವು ಡಿಸೆಂಬರ್ 5 ರಿಂದ ಜಾರಿಗೆ ಬರುವ ಸಾಧ್ಯತೆ ಇದೆ. ಕೆಪ್ಲರ್ಸ್ ದತ್ತಾಂಶಗಳ ಪ್ರಕಾರ ಯುದ್ಧ ಪ್ರಾರಂಭವಾದ ಏಳು ತಿಂಗಳ ಅವಧಿಯಲ್ಲಿ ರಷ್ಯಾದ ಸಮುದ್ರ ಮೂಲಕ ರಫ್ತಾಗುವ ಕಚ್ಚಾತೈಲವು ಸರಾಸರಿ ಒಂದು ದಿನಕ್ಕೆ 3.4 ಮಿಲಿಯನ್ ಬ್ಯಾರೆಲ್ಲುಗಳು. ಅದು 2021 ರ ಅದೇ ಅವಧಿಯಲ್ಲಿನ ಶೇ.17 ರಷ್ಟು ಹೆಚ್ಚಾಗಿದೆ.

ಈ ಹಿನ್ನೆಲೆಯಲ್ಲಿ ತೈಲ ಉತ್ಪಾದನೆಯನ್ನು ಪ್ರತಿ ದಿನ 2 ಮಿಲಿಯನ್ ಬ್ಯಾರೆಲ್ಲುಗಳಷ್ಟು ಕಡಿತಗೊಳಿಸಬೇಕೆಂಬ ಒಪಿಇಸಿ (ಆರ್ಗನೈಸೇಷನ್ ಆಫ್ ಪೆಟ್ರೋಲಿಯಂ ಎಕ್ಸ್‌ಪೋರ್ಟಿಂಗ್ ಕಂಟ್ರೀಸ್) ತೀರ್ಮಾನವು ಜಾಗತಿಕವಾಗಿ ತೈಲದ ಬೆಲೆಯನ್ನು ಹೆಚ್ಚಿಸುತ್ತದೆ. ಇದು ಅಮೆರಿಕಾ ಮತ್ತು ಸೌದಿ ಅರೇಬಿಯಾ ನಡುವಿನ ದುರ್ಬಲ ದ್ವಿಪಕ್ಷೀಯ ಸಂಬಂಧಗಳನ್ನು ಎತ್ತಿ ತೋರಿಸುತ್ತದೆ.

23ನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಹೇಳಿದಂತೆ "ಈ ಯುದ್ಧವು ಈ ಕೂಡಲೇ ಕೊನೆಗೊಳ್ಳಬೇಕು ಮತ್ತು ವಿವಾದಾತ್ಮಕ ವಿಷಯಗಳನ್ನು ಮಾತುಕತೆ ಹಾಗೂ ಸಂಧಾನಗಳ ಮೂಲಕ ಬಗೆಹರಿಸಿಕೊಳ್ಳಬೇಕು." ನ್ಯಾಟೋದ ಪೂರ್ವದಿಕ್ಕಿನ ಕಡೆಗಿನ ವಿಸರ್‍ರಣೆಯ ತಡೆಯನ್ನು ಅಮೆರಿಕಾ/ನ್ಯಾಟೋ ಈ ಕೂಡಲೇ ಕಾತರಿಪಡಿಸಬೇಕು ಮತ್ತು ಜಾಗತಿಕ ಆರ್ಥಿಕತೆಯ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತಿರುವ ದಿಗ್ಬಂಧನಗಳನ್ನು ಈ ಕೂಡಲೇ ತೆರವುಗೊಳಿಸಬೇಕು.

**ಹೆಚ್ಚುತ್ತಿರುವ ಜೀವನೋಪಾಯದ ಕಳವಳಗಳು**

ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಯುಕ್ರೇನ್ ಯುದ್ಧದ ಪರಿಣಾಮವು ಜನರ ಜೀವನೋಪಾಯದ ಮೇಲೆ ತೀವ್ರತರದ ಹೊರೆಗಳನ್ನು ಹೊರಿಸುತ್ತಿದೆ.

ಜಗತ್ತಿನೆಲ್ಲೆಡೆ ಸ್ಥಳೀಯ **ಆಹಾರದ ಬೆಲೆ ಹಣದುಬ್ಬರವು** ಗಗನಕ್ಕೇರುತ್ತಿದೆ. 2022 ರ ಮೇ ಮತ್ತು ಸೆಪ್ಟೆಂಬರ್ ನಡುವಿನ ವಿಶ್ವಬ್ಯಾಂಕಿನ ದತ್ತಾಂಶಗಳ ಪ್ರಕಾರ ಬಹುತೇಕ ಎಲ್ಲಾ ಕಡಿಮೆ ಆದಾಯದ ಹಾಗೂ ಮಧ್ಯಮ ಆದಾಯದ ದೇಶಗಳಲ್ಲಿ ಹಣದುಬ್ಬರ ಹೆಚ್ಚಾಗಿದೆ; ಶೇ.88.9 ಕಡಿಮೆ ಆದಾಯದ ದೇಶಗಳು, ಶೇ.91.1 ಕೆಳಮಧ್ಯಮ ಆದಾಯದ ದೇಶಗಳು ಮತ್ತು ಶೇ.96 ಮೇಲ್ಮಧ್ಯಮ ಆದಾಯದ ದೇಶಗಳು ಶೇ.5 ಕ್ಕಿಂತಲೂ ಹೆಚ್ಚಿನ ಮಟ್ಟದ ಹಣದುಬ್ಬರವನ್ನು ಅನುಭವಿಸಿವೆ. ತೀವ್ರ ಆಹಾರದ ಬೆಲೆಗಳು ಜಾಗತಿಕ ಬಿಕ್ಕಟ್ಟನ್ನು ಪ್ರಚೋದಿಸಿವೆ ಮತ್ತು ಅದು ಮಿಲಿಯಾಂತರ ಜನರನ್ನು **ಉತ್ಕಟ ಬಡತನಕ್ಕೆ ನೂಕಿದೆ, ಹಸಿವನ್ನು ಹಾಗೂ ಅಪೌಷ್ಟಿಕತೆಯನ್ನು ಹೆಚ್ಚಿಸಿದೆ.** ಅಕ್ಟೋಬರ್ 2021 ಕ್ಕೆ ಹೋಲಿಸಿದರೆ ಗೋಧಿ, ಜೋಳ ಹಾಗೂ ಅಕ್ಕಿಯ ಸರಾಸರಿ ಬೆಲೆಯು ಅಕ್ಟೋಬರ್ 2022 ರಲ್ಲಿ ಅನುಕ್ರಮವಾಗಿ ಶೇ.18, ಶೇ.27 ಹಾಗೂ ಶೇ.10 ರಷ್ಟು ಹೆಚ್ಚಿದೆ. ಐಎಂಎಫ್ ಪ್ರಕಾರ ಆಹಾರ ಹಾಗೂ ರಸಗೊಬ್ಬರದ ಆಮದು ಬೆಲೆಗಳಲ್ಲಿನ ಏರಿಕೆಯಿಂದ ಬಹಳವಾಗಿ ಬಾಧಿತರಾದ 48 ದೇಶಗಳಲ್ಲಿನ ದುರ್ಬಲ ಕುಟುಂಬಗಳಿಗೆ ನೆರವು ನೀಡಲು 5 ಬಿಲಿಯನ್ ಡಾಲರ್‌ನಿಂದ 7 ಬಿಲಿಯನ್ ಡಾಲರುಗಳಷ್ಟು ಹೆಚ್ಚಿನ ವೆಚ್ಚದ ಅಗತ್ಯವಿದೆ. ಮುಂದಿನ 12 ತಿಂಗಳುಗಳ **ತೀವ್ರ ಆಹಾರ ಅಭದ್ರತೆ**ಯನ್ನು ನೀಗಿಸಲು ಹೆಚ್ಚುವರಿ 50 ಬಿಲಿಯನ್ ಡಾಲರುಗಳಷ್ಟು ಬೇಕಾಗಬಹುದು. ಎಫ್.ಎ.ಒ. (ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ) ವರದಿಯ ಪ್ರಕಾರ ತೀವ್ರ ಆಹಾರ ಅಭದ್ರತೆಯಿಂದ ನರಳುತ್ತಿರುವವರು ಮತ್ತು ತಕ್ಷಣದ ನೆರವಿನ ಅಗತ್ಯವಿರುವ ಜನರ ಸಂಖ್ಯೆಯು 53 ದೇಶಗಳು ಮತ್ತು ಸ್ವಯಮಾಡಳಿತ ಪ್ರದೇಶಗಳಲ್ಲಿ 222 ಮಿಲಿಯನ್‌ಗೆ ಏರುವ ಸಾಧ್ಯತೆ ಇದೆ.

**ಜಾಗತಿಕ ಪ್ರತಿಭಟನೆಗಳು**

ಏರುತ್ತಿರುವ ಹಣದುಬ್ಬರದ ಎದುರಿನಲ್ಲಿ ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿರುವುದರಿಂದ ಜಗತ್ತಿನೆಲ್ಲೆಡೆ ವಿವಿಧ ವಲಯಗಳ ಕಾರ್ಮಿಕ ಸಂಘಟನೆಗಳು ಸಾಮೂಹಿಕ ಮುಷ್ಕರದ ನಿರ್ಧಾರ ತೆಗೆದುಕೊಂಡಿವೆ. ಸಂಬಳ ಏರಿಕೆಯ ವಿವಾದಗಳ ಜತೆಯಲ್ಲೇ, ಉತ್ತಮ ಸೇವಾ ನಿಯಮಗಳಿಗಾಗಿ ಹಾಗೂ ನಿವೃತ್ತಿವೇತನ ಹಕ್ಕುಗಳಿಗಾಗಿ ಕಾರ್ಮಿಕರು ಬೇಡಿಕೆಗಳನ್ನು ಮುಂದಿಡುತ್ತಿದ್ದಾರೆ. ಯುರೋಪಿಯನ್ ಯೂನಿಯನ್ ದೇಶಗಳಲ್ಲಿ ಕಾರ್ಮಿಕರ ತೀವ್ರತರದ ಕಷ್ಟಕೋಟಲೆಗಳನ್ನು ಪ್ರತಿಫಲಿಸುವ ಹಲವಾರು ಮುಷ್ಕರಗಳು ಒಂದೇ ವಲಯಗಳಲ್ಲಿ ಕಡಿಮೆ ಅವಧಿಯೊಳಗೆ ನಡೆದಿವೆ.

**ಯುನೈಟೆಡ್ ಕಿಂಗ್‌ಡಮ್ (ಯುಕೆ) ನಲ್ಲಿ ಪ್ರತಿಭಟನೆಗಳು**

ಏರುತ್ತಿರುವ ಬೆಲೆಗಳಿಗೆ ಅನುಗುಣವಾಗಿ ಸಂಬಳದ ಒಪ್ಪಂದಗಳಿಗೆ ಒತ್ತಾಯಿಸಿ ಹತ್ತಾರು ಸಾವಿರ ಕಾರ್ಮಿಕರು ಯುಕೆಯಲ್ಲಿ ಮುಷ್ಕರಮಾಡಿದ್ದಾರೆ. ಕಳೆದ 40 ವರ್ಷಗಳಲ್ಲೇ ಈಗ ಮೊದಲ ಬಾರಿಗೆ ಹಣದುಬ್ಬರವು ಶೇ.10 ರಷ್ಟು ಮಿತಿ ಮೀರಿ ಹೆಚ್ಚಾಗಿರುವುದರಿಂದ ಕಾರ್ಮಿಕರ ಸಂಬಳಗಿಂತ ವೇಗವಾಗಿ ಅವರ ಜೀವನೋಪಾಯದ ವೆಚ್ಚಗಳು ಹೆಚ್ಚಾಗುತ್ತಿವೆ. ಸಂಬಳ ಏರಿಕೆಯ ಒಪ್ಪಂದಗಳನ್ನು ಮಾಡಿಕೊಂಡಿರುವ ವಲಯಗಳಲ್ಲಿ ಕೂಡ ಸಂಬಳ ಏರಿಕೆಯು ಹಣದುಬ್ಬರದ ಏರಿಕೆಯ ಪ್ರಮಾಣಕ್ಕಿಂತ ಬಹಳ ಕಡಿಮೆಯಾಗಿವೆ. 2019 ರಲ್ಲಿ, ಮುಷ್ಕರಗಳಿಂದಾಗಿ ಸರಾಸರಿ ಒಂದು ದಿನಕ್ಕೆ 19,500 ಮಾನವ ದಿನಗಳ ನಷ್ಟವಾಗಿವೆ. ಜುಲೈ 2022 ರಲ್ಲಿ, ಆ ಅಂಕಿಯು 87,600 ತಲುಪಿದೆ ಎಂದು 'ಆಫಿಸ್ ಫಾರ್ ನ್ಯಾಷನಲ್ ಸ್ಟಾಟಿಸ್ಟಿಕ್ಸ್' ವರದಿ ಮಾಡಿದೆ.

ಜೂನ್ ತಿಂಗಳಿನಿಂದ ರೈಲ್ವೇ ಕ್ಷೇತ್ರದಲ್ಲಿ ನಿರಂತರ ಮುಷ್ಕರಗಳು ನಡೆದು ರೈಲ್ವೇ ಜಾಲ ಹೆಚ್ಚೂ ಕಡಿಮೆ ಸ್ಥಗಿತಗೊಂಡಿದೆ. ರಾಯಲ್ ಮೈಲ್‌ನಲ್ಲಿ ಆಗಸ್ಟ್ ತಿಂಗಳಿನಿಂದ ಕಾರ್ಮಿಕರು ಮುಷ್ಕರದಲ್ಲಿದ್ದಾರೆ. ಈ ಮುಷ್ಕರಗಳಲ್ಲಿ ಕಮ್ಯುನಿಕೇಷನ್ ವರ್ಕರ್ಸ್ ಯೂನಿಯನ್ ನ 1,15,000 ಸದಸ್ಯರು ಭಾಗವಹಿಸಿದ್ದಾರೆ.

ಮೊಟ್ಟ ಮೊದಲ ಬಾರಿಗೆ ಬಿಟಿ ಹಾಗೂ ಓಪನ್ ರೀಚ್‌ನ 40, 000 ಕಾರ್ಮಿಕರು ಅಕ್ಟೋಬರ್‌ನಲ್ಲಿ ಮುಷ್ಕರಕ್ಕಿಳಿದಿದ್ದಾರೆ. ಕ್ರಿಮಿನಲ್ ನ್ಯಾಯವಾದಿಗಳು (ಬ್ಯಾರಿಸ್ಟರ್ಸ್) ಇಂಗ್ಲೆಂಡ್ ಮತ್ತು ವೇಲ್ಸ್‌ನಲ್ಲಿ ತಾವು ಪ್ರತಿನಿಧಿಸುವ ಅರ್ಜಿದಾರರ ಪ್ರಕರಣಗಳಿಗೆ ಹೆಚ್ಚಿನ ಶುಲ್ಕಕ್ಕೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವುದರಿಂದ ವಿಚಾರಣೆಗಳು ವಿಳಂಬವಾಗುತ್ತಿವೆ.

ಸಂಬಳ ಹಾಗೂ ನಿವೃತ್ತಿ ವೇತನಕ್ಕಾಗಿ 150 ವಿಶ್ವವಿದ್ಯಾಲಯಗಳ 70,000 ಸಿಬ್ಬಂದಿಗಳು ಯೂನಿವರ್ಸಿಟೀಸ್ ಅಂಡ್ ಕಾಲೇಜಸ್ ಯೂನಿಯನ್ ಮುಷ್ಕರಕ್ಕಾಗಿ ಮತದಾನ ಮಾಡಿದ್ದಾರೆ. ಶಿಕ್ಷಕರ ಸಂಘ, ಆರೋಗ್ಯ ಸಿಬ್ಬಂದಿಗಳು, ತೈಲ ಮತ್ತು ಅನಿಲ ಕಾರ್ಮಿಕರು ಮತ್ತಿತರ ವಿಭಾಗದ ಸಂಘದವರು ಮುಷ್ಕರಕ್ಕೆ ಕರೆ ನೀಡಿದ್ದಾರೆ.

**ನೆದರ್‌ಲೆಂಡಿನ**ಲ್ಲಿ ಬಸ್ ಚಾಲಕರು ಉತ್ತಮ ಸಂಬಳ, ಸಾರಿಗೆ ಹಾಗೂ ಸೇವಾ ನಿಯಮಗಳಿಗೆ ಒತ್ತಾಯಿಸಿ ಅಕ್ಟೋಬರ್ 19 ರಿಂದ 21, ಮೂರು ದಿನಗಳ ನಡೆಸಿದರು.

**ಸ್ವಿಟ್ಜರ್‌ಲೆಂಡಿನ**ಲ್ಲಿ ಕಟ್ಟಡ ಕಾರ್ಮಿಕರು ಹೆಚ್ಚಿನ ಸಂಬಳ, ನಿಗದಿತ ಕೆಲಸದ ವೇಳೆ, ಮತ್ತು ಸುರಕ್ಷಿತ ಕೆಲಸದ ವಾತಾವರಣ ಮುಂತಾದವುಗಳೊಂದಿಗೆ ಹೊಸ ಗುತ್ತಿಗೆ ಒಪ್ಪಂದಕ್ಕೆ ಒತ್ತಾಯಿಸಿ ಅಕ್ಟೋಬರ್ 17 ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

**ಫ್ರೆಂಚ್** ಕಾರ್ಮಿಕರು ಗಗನಕ್ಕೇರುತ್ತಿರುವ ಜೀವನಾವಶ್ಯಕ ವಸ್ತುಗಳ ಬೆಲೆಗಳಿಗೆ ಸರಿಸಮವಾಗಿ ಹೆಚ್ಚಿನ ಸಂಬಳಕ್ಕಾಗಿ ಒತ್ತಾಯಿಸಿ ರಾಷ್ಟ್ರವ್ಯಾಪಿ ಮುಷ್ಕರದಲ್ಲಿ ಪಾಲ್ಗೊಂಡಿದ್ದಾರೆ. ಫ್ರಾನ್ಸಿನ ಭಾರಿ ತೈಲ ಸಂಸ್ಕರಣಾ ಘಟಕಗಳ ಕಾರ್ಮಿಕರು ಪ್ರತಿಭಟನಾ ಕಾರ್ಯಾಚರಣೆ ನಡೆಸಿದ್ದು ಅದು ಸಾರಿಗೆ, ಶಾಲೆಗಳು, ವೈದ್ಯಕೀಯ ಸೇವೆ, ನಾಗರಿಕ ಸೇವೆಗಳು, ವಿದ್ಯುತ್ ಮತ್ತಿತರ ವಲಯಗಳಿಗೂ ಹಬ್ಬಿದೆ.

ಬೆಲೆಏರಿಕೆ ಹಾಗೂ ಪರಿಸರ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಇಮ್ಯಾನುಯಲ್ ಮ್ಯಾಕ್ರನ್ಸ್ ಸರ್ಕಾರದ ವೈಫಲ್ಯದ ವಿರುದ್ಧ **ಪ್ಯಾರಿಸ್**ನಲ್ಲಿ 1,00,000 ಕ್ಕೂ ಹೆಚ್ಚು ಜನರು ಅಕ್ಟೋಬರ್ 16 ರಂದು ಪ್ರತಿಭಟನೆ ನಡೆಸಿದ್ದಾರೆ. ಈ ಪ್ರತಿಭಟನಾ ಮೆರವಣಿಗೆಯಲ್ಲಿ ಇತ್ತೀಚೆಗೆ ರಚನೆಯಾದ ನ್ಯೂ ಇಕಲಾಜಿಕಲ್ ಅಂಡ್ ಸೋಶಿಯಲ್ ಪೀಪಲ್ಸ್ ಯೂನಿಯನ್ (ಎನ್.ಯು.ಪಿ.ಇ.ಎಸ್) ಮಾತ್ರವಲ್ಲದೇ ಫ್ರಾನ್ಸ್ ಕಮ್ಯುನಿಸ್ಟ್ ಪಕ್ಷ, ಲ ಫ್ರಾನ್ಸ್ ಇನ್‌ಸೌರ್ನೈಸ್, ಮತ್ತು ಜನರಲ್ ಕನ್ಫೆಡರೇಷನ್ ಆಫ್ ಲೇಬರ್ (ಸಿಜಿಟಿ) ನ್ನೂ ಒಳಗೊಂಡಂತೆ ಇತರ ಕಾರ್ಮಿಕ ಸಂಘಟನೆಗಳು ಪಾಲ್ಗೊಂಡಿದ್ದವು.

ಹಣದುಬ್ಬರ ಮತ್ತು ಏರುತ್ತಿರುವ ಬೆಲೆಗಳನ್ನು ಹಿಮ್ಮೆಟ್ಟಿಸಲು ನಿರ್ದಿಷ್ಟ ಕ್ರಮಗಳಿಗಾಗಿ ಒತ್ತಾಯಿಸಿ **ಸೈಪ್ರಸ್**ನ ಕಾರ್ಮಿಕರು ಅಕ್ಟೋಬರ್ 15 ರಂದು ನಿಕೋಸಿಯಾದಲ್ಲಿರುವ ಮಿನಿಸ್ಟ್ರಿ ಆಫ್ ಫೈನಾನ್ಸ್ ಎದುರಿಗೆ ಮೆರವಣಿಗೆಯಲ್ಲಿ ಹೋಗಿ ಪ್ರತಿಭಟನೆ ಮಾಡಿದರು.

ಈ ಅವಧಿಯಲ್ಲಿ ವ್ಯಾಪಾರಿಗಳು ಗಳಿಸಿರುವ ಅಪಾರ ಲಾಭದ ಮೇಲೆ ಸರ್ಕಾರವು ತೆರಿಗೆ ವಿಧಿಸಬೇಕು ಎಂದು ಒತ್ತಾಯಿಸಿ ಅಕ್ಟೋಬರ್ 14 ರಂದು ಬ್ರುಸೆಲ್ಸ್‌ನಲ್ಲಿರುವ ಇಎನ್‌ಜಿಐಇ ಕಛೇರಿಗಳ ಎದುರು ಪ್ರತಿ ಶುಕ್ರವಾರದ ಸಾಪ್ತಾಹಿಕ ರೋಷಾವೇಶದ ಮೆರವಣಿಗೆ ಭಾಗವಾಗಿ **ಬೆಲ್ಜಿಯಮ್**ನ ವರ್ಕರ್ಸ್ ಪಕ್ಷವು (ಪಿಟಿಬಿ/ಪಿವಿಡಿಎ) ಕಾರ್ಯಕರ್ತರ ಪ್ರತಿಭಟನಾ ಮತಪ್ರದರ್ಶನ ಸಂಘಟಿಸಿತು.

ಜೀವನ ವೆಚ್ಚದಲ್ಲಿನ ಏರಿಕೆಯಿಂದಾಗಿ **ಅಮೆರಿಕಾ**ದಲ್ಲಿ ಕೌಟುಂಬಿಕ ಮಾಸಿಕ ವೆಚ್ಚವು 460 ಡಾಲರಿನಷ್ಟು ಹೆಚ್ಚಾಗಿರುವ ಕಾರಣ ಕಾರ್ಮಿಕ ವರ್ಗದಿಂದ ಹಲವಾರು ಪ್ರತಿಭಟನೆಗಳು ನಡೆಯುತ್ತಿವೆ. ಅಮೆರಿಕಾದ ಇತಿಹಾಸದಲ್ಲೇ ಮೊದಲ ಬಾರಿಗೆ ಖಾಸಗಿ ವಲಯದ ಆರೋಗ್ಯ ಸೇವೆಯ 15,000 ನರ್ಸುಗಳು ಮಿನ್ನೋಟಾದಲ್ಲಿ ಮುಷ್ಕರ ಮಾಡಿದ್ದಾರೆ; 6,000 ಸಿಯಾಟಲ್ ಶಿಕ್ಷಕರು ತಮ್ಮ ತರಗತಿಗಳಿಂದ ಹೊರ ನಡೆದರು; 1,00,000 ಕಿಂತಲೂ ಹೆಚ್ಚು ರೈಲುಮಾರ್ಗದ ಕಾರ್ಮಿಕರು ಮುಷ್ಕರ ಮಾಡಿದರು.

ಸಂಬಳ ಹಾಗೂ ನಿವೃತ್ತಿ ವೇತನ ಹೆಚ್ಚಿಸಲು, ಅಗ್ಗದ ವಿದ್ಯುತ್, ತೈಲ ಹಾಗೂ ಆಹಾರಕ್ಕಾಗಿ, ತೆರಿಗೆಗಳನ್ನು ರದ್ದು ಮಾಡಲು, ಜೀವನಾವಶ್ಯಕ ವಸ್ತುಗಳ ಮೇಲೆ ಬೆಲೆ ಕಡಿತ ಹಾಗೂ ಏರಿಕೆ ತಡೆ ಒಡ್ಡಲು, ಮತ್ತು ಸಾಲ ರದ್ದು ಮಾಡಲು ಒತ್ತಾಯಿಸಿ **ಗ್ರೀಸ್**ನಲ್ಲಿ ಭಾರಿ ಪ್ರತಿಭಟನೆಎಳು ನಡೆಯುತ್ತಿವೆ. ಕಾರ್ಮಿಕ ಸಂಘಗಳು ಇತರೆ ಸಾಮೂಹಿಕ ಸಂಘಟನೆಗಳ ಜತೆಯಲ್ಲಿ ನವಂಬರ್ 9 ರಂದು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿವೆ.

ಇದೇ ರೀತಿಯ ಕಾರ್ಮಿಕ ವರ್ಗದ ಪ್ರತಿಭಟನೆಗಳು ಯೂರೋಪಿನ **ಜರ್ಮನಿ, ಜೆಕ್ ರಿಪಬ್ಲಿಕ್, ಸರ್ಬಿಯಾ, ಹಂಗರಿ ಮತ್ತು ಮಾಲ್ಡೋವ**ಗಳಲ್ಲಿ ನಡೆದಿವೆ; ಆಫ್ರಿಕಾದ **ಟುನಿಸಿಯಾ, ಜಿನಿಯಾ, ಕೆನ್ಯಾ, ಸೂಡಾನ್ ಮತ್ತು ಕೇಂದ್ರ ಆಫ್ರಿಕನ್ ಪ್ರದೇಶಗಳಲ್ಲಿ ಮತ್ತು** ಲ್ಯಾಟಿನ್ ಅಮೆರಿಕಾದ **ಈಕ್ವೆಡಾರ್ ಹಾಗೂ ಅರ್ಜಂಟೈನಾ**ಗಳಲ್ಲೂ ಪ್ರತಿಭಟನೆಗಳು ನಡೆದಿವೆ.

ಈ ಮುಷ್ಕರಗಳಲ್ಲಿ ಕೆಲವನ್ನಷ್ಟೆ ಇಲ್ಲಿ ವರದಿ ಮಾಡಲಾಗಿದೆ. ಏರುತ್ತಿರುವ ಬೆಲೆಗಳು ಜಗತ್ತಿನಾದ್ಯಂತ ಹಲವಾರು ದೇಶಗಳಲ್ಲಿ ವ್ಯಾಪಕ ಪ್ರತಿಭಟನೆಗಳನ್ನು ಹುಟ್ಟುಹಾಕುತ್ತಿದೆ.

**ಇರಾನ್:** ಇರಾನಿನಲ್ಲಿ ಮಹಿಳಾ ಹಕ್ಕುಗಳ ಮೇಲಿನ ದಾಳಿಗಳ ವಿರುದ್ಧ ಭಾರಿ ಪ್ರತಿಭಟನೆಗಳು ನಡೆಯುತ್ತಿವೆ. ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯ ಹೊರೆಗಳಿಂದ ನರಳುತ್ತಿರುವವರು ಕೂಡ ಈ ಪ್ರತಿಭಟನೆಗಳಲ್ಲಿ ಸೇರಿಕೊಳ್ಳುತ್ತಿದ್ದಾರೆ. ಈ ಪ್ರತಿಭಟನಗಳನ್ನು ಭೀಕರವಾಗಿ ದಮನ ಮಾಡಲಾಗುತ್ತಿದೆ, ಅದರಿಂದಾಗಿ ಭಾರಿ ಸಾವು ನೋವುಗಳೂ ವರದಿಯಾಗುತ್ತಿವೆ.

**ಪ್ಯಾಲೆಸ್ತೈನ್:** ಪಶ್ಚಿಮ ದಂಡೆ (ವೆಸ್ಟ್ ಬ್ಯಾಂಕ್) ಮತ್ತಿತರ ಆಕ್ರಮಿತ ಪ್ರದೇಶಗಳಲ್ಲಿ ಪ್ಯಾಲೆಸ್ತೈನರ ಮೇಲೆ ಭಯಂಕರ ದಮನಕಾರಿ ದಾಳಿಗಳು ನಡೆಯುತ್ತಿವೆ. ಈ ವರ್ಷ ಇಲ್ಲಿಯವರೆಗೆ 184 ಪ್ಯಾಲೆಸ್ತೈನರು ಇಸ್ರೇಲಿ ಸೈನಿಕರಿಂದ ಹತರಾಗಿದ್ದಾರೆ. ಇಸ್ರೇಲಿ ಅಧಿಕಾರಿಗಳು ಪಶ್ಚಿಮ ದಂಡೆಯಲ್ಲಿರುವ ಗಾಜಾದಲ್ಲಿ ಇತ್ತೀಚೆಗೆ ಪ್ಯಾಲೆಸ್ತೈನಿ ಮಾನವ ಹಕ್ಕುಗಳ ರಕ್ಷಕರು ಹಾಗೂ ನಾಗರಿಕ ಸಮಾಜ ಸಂಘಟನೆಗಳ ಮೇಲಿನ ದಾಳಿಗಳನ್ನು ಹೆಚ್ಚಿಸಿದ್ದಾರೆ. ಈ ಹಲವಾರು ಸಂಘಟನೆಗಳನ್ನು ಈ ಹಿಂದೆ ಏಕಪಕ್ಷೀಯವಾಗಿ ಕಾನೂನು ಬಾಹಿರ ಮಾಡಲಾಗಿತ್ತು. ಅಂತರ್ರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘನೆ ಮಾಡುತ್ತಿರುವ ಮತ್ತು ಜನಾಂಗೀಯ ದ್ವೇಷ ನೀತಿಯನ್ನು ಅನುಸರಿಸುತ್ತಿರುವ ಹಾಗೂ ಮಿಲಿಯಾಂತರ ಪ್ಯಾಲೆಸ್ತೈನಿಗಳನ್ನು ಹಿಂಸಿಸುತ್ತಿರುವ ಇಸ್ರೇಲಿನ ನಡೆಯನ್ನು ಟೀಕಿಸುವವರನ್ನು ಗುರಿಯಾಗಿಸಿಕೊಂಡು ಈ ದಾಳಿಗಳು ನಡೆಯುತ್ತಿವೆ. ಪ್ಯಾಲೆಸ್ತೈನಿನ ಪ್ರದೇಶಗಳ ಕಾನೂನು ಬಾಹಿರ ಆಕ್ರಮಣ ಮತ್ತು ಯಹೂದಿ ವಸತಿಯ ಸ್ಥಾಪನೆಗಳು ಮುಂದುವರಿಯುತ್ತಲೇ ಇವೆ.

**ಚುನಾವಣೆಗಳು**

ಹಲವಾರು ದೇಶಗಳಲ್ಲಿ ಇತ್ತೀಚೆಗೆ ನಡೆದ ಚುನಾವಣಾ ಫಲಿತಾಂಶಗಳು, ನಮ್ಮ 23 ನೇ ಮಹಾಧಿವೇಶನದಲ್ಲಿ ಗಮನಿಸಿದಂತೆ, ರಾಜಕೀಯವಾಗಿ ಬಲಪಂಥದತ್ತ ವಾಲುತ್ತಿರುವುದನ್ನು ನೋಡುತ್ತೇವೆ. ಹೆಚ್ಚುತ್ತಿರುವ ಹಣದುಬ್ಬರ, ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ಸರಿದೂಗಿಸಲು ಸಂಬಳ ಏರಿಕೆಗಳ ಕೊರತೆ, ಸಮಾಜವಾದಿ ಪ್ರಜಾಪ್ರಭುತ್ವ ಹಾಗೂ ಸಂಪ್ರದಾಯವಾದಿ ಎರಡೂ ಆಡಳಿತಗಳ ಆರ್ಥಿಕ ನೀತಿಗಳ ವೈಫಲ್ಯ ಜನರಲ್ಲಿ ವ್ಯಾಪಕ ಅತೃಪ್ತಿಯನ್ನು ಉಂಟುಮಾಡುತ್ತಿದೆ. ಧಾರ್ಮಿಕ ಭಾವನೆಗಳನ್ನು ಹಾಗೂ ಜನಾಂಗವಾದವನ್ನು ಬಳಸುವುದರ ಮೂಲಕ ಉಗ್ರ ಬಲಪಂಥೀಯ ಶಕ್ತಿಗಳು ಅನೇಕ ದೇಶಗಳಲ್ಲಿ ತಮ್ಮ ಮುನ್ನಡೆಯನ್ನು ಸಾಧಿಸಿವೆ.

**ಇಟಲಿ:** ಅಗ್ರ ಸಂಪ್ರದಾಯವಾದಿ, ಬ್ರದರ್ಸ್ ಆಫ್ ಇಟಲಿ ಪಕ್ಷದ ಅಧ್ಯಕ್ಷೆ ಜಾರ್ಜಿಯಾ ಮೆಲೊನಿಯವರ ನೇತೃತ್ವದ ಉಗ್ರ ಬಲಪಂಥೀಯರು ಇಟಲಿಯ ಪಾರ್ಲಿಮೆಂಟಿಗೆ ಚುನಾವಣೆಯಲ್ಲಿ ಗೆದ್ದಿದ್ದಾರೆ, ಶೇ.44 ರಷ್ಟು ಮತ ಪಡೆದಿದ್ದಾರೆ. ಅವರ ಮೈತ್ರಿಕೂಟದಲ್ಲಿ ಮಾಜಿ ಪ್ರಧಾನ ಮಂತ್ರಿ ಸಿಲ್ವಿಯೊ ಬರ್ಲುಸ್ಕೋನಿ ಅವರ ನೇತೃತ್ವದ ಫೋರ್ಜಾ ಇಟಾಲಿಯ ಹಾಗೂ ಮಟ್ಟೋ ಸಲ್ವಿನಿಯ ವಲಸೆ ವಿರೋಧಿ ಲೀಗ್ ಇವೆ. ಫ್ಯಾಸಿಸ್ಟ್ ಸರ್ವಾಧಿಕಾರಿ ಬೆನಿಟೋ ಮುಸೊಲಿನಿ ಸರ್ಕಾರದ ನಂತರ ಈಗ ಮೊಟ್ಟ ಮೊದಲ ಬಾರಿಗೆ ಇಟಲಿಯಲ್ಲಿ ಉಗ್ರ ಬಲಪಂಥೀಯ ಸರ್ಕಾರವೊಂದು ಅಧಿಕಾರಕ್ಕೆ ಬಂದಿದೆ. ಮೆಲೊನಿ ವಲಸೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ ಮತ್ತು ಸಂಪ್ರದಾಯವಾದಿ 'ಕೌಟುಂಬಿಕ ಮೌಲ್ಯಗಳನ್ನು' ಬೆಂಬಲಿಸುತ್ತಾರೆ. ಮೆಲೊನಿ ಕಟ್ಟಾ ಅಮೆರಿಕಾದ ಪರವಾಗಿದ್ದು ದಮನಕಾರಿ ರಾಷ್ಟ್ರೀಯ ಸುರಕ್ಷಾ ನೀತಿಗಳನ್ನು ಪ್ರತಿಪಾದಿಸುತ್ತಾರೆ. ಅವರ ರಾಜಕೀಯ ಬದುಕು ಅವರ ಹದಿಹರೆಯದ ವಯಸ್ಸಿನಲ್ಲಿ ನವ-ಫ್ಯಾಸಿಸ್ಟ್ ಇಟಾಲಿಯನ್ ಸೋಶಿಯಲ್ ಮೂವ್‌ಮೆಂಟ್‌ನ ಕಾರ್ಯಕರ್ತೆಯಾಗಿ ಪ್ರಾರಂಭವಾಯಿತು. ಇಟಲಿಯು ಭಾರಿ ಸಾರ್ವಜನಿಕ ಸಾಲ ಹೊಂದಿದ್ದು ಅದು ಅಲ್ಲಿಯ ಜಿಡಿಪಿಯ ಶೇ.135 ರಷ್ಟಿದೆ ಮತ್ತು ಜಾಗತಿಕ ಬಡ್ಡಿ ದರ ಏರಿದಂತೆ ಸಾಲದ ಬಡ್ಡಿಯೂ ಹೆಚ್ಚಾಗುತ್ತಿದೆ ಹಾಗೂ ಅಲ್ಲಿ ಯುವಜನರ ನಿರುದ್ಯೋಗದ ದರವು (ಸುಮಾರು ಶೇ.25 ರಷ್ಟು) ತೀವ್ರವಾಗಿ ಹೆಚ್ಚಿದೆ; ಈ ಅಂಶಗಳು ತೀವ್ರಗತಿಯಲ್ಲಿ ಉಲ್ಬಣಿಸಿ ಜನರಲ್ಲಿ ಅತೃಪ್ತಿ ಉಂಟುಮಾಡಿದೆ ಮತ್ತು ಅದು ಉಗ್ರ ಬಲಪಂಥೀಯರ ಹೆಚ್ಚಳಕ್ಕೆ ಕಾರಣವಾಯಿತು.

**ಸ್ವೀಡನ್:** ಸೌಮ್ಯವಾದಿ ಪಕ್ಷದ ನಾಯಕ ಉಲ್ಫ್ ಕ್ರಿಸ್ಟರ್‌ಸನ್ ಅವರು ಸ್ವೀಡನ್ನಿನ ಮೂರು ಅಲ್ಪಸಂಖ್ಯಾತ ಮೈತ್ರಿಕೂಟದ ಮುಖ್ಯಸ್ಥರಾಗಿ ಪ್ರಧಾನ ಮಂತ್ರಿಯಾಗಿ ಚುನಾಯಿತರಾದರು, ಆ ಕೂಟದಲ್ಲಿ ಮೊಟ್ಟಮೊದಲಿಗೆ ವಲಸೆ ವಿರೋಧಿ ಸ್ವೀಡನ್ ಡೆಮಾಕ್ರಾಟ್ಸ್ (ಎಸ್‌ಡಿ) ಪಕ್ಷವು ಸರ್ಕಾರದ ಭಾಗವಾಗಿದೆ. ದೇಶದ ಚುನಾವಣೆಯಲ್ಲಿ ಸ್ವೀಡನ್ ಡೆಮಾಕ್ರಾಟ್ಸ್ ಪಕ್ಷವು ನಿಜವಾದ ಗೆದ್ದ ಪಕ್ಷವಾಗಿದ್ದು ಶೇಕಡಾ ಎರಡರಿಂದ ಮೂರರಷ್ಟು ಹೆಚ್ಚು ಮತ ಪಡೆದು ಎರಡನೆ ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಒಟ್ಟು ಬಲಪಂಥೀಯ ಗುಂಪು ಶೇ.49.7 ರಷ್ಟು ಮತ ಪಡೆದು ಪಾರ್ಲಿಮೆಂಟಿನಲ್ಲಿ ಈ ಹಿಂದೆ ಅಧಿಕಾರದಲ್ಲಿದ್ದ ಎಡಪಂಥೀಯ ಗುಂಪಿಗಿಂತ ಒಂದು ಸ್ಥಾನ ಹೆಚ್ಚು ಪಡೆಯುವ ಮೂಲಕ ಬಹುಮತ ಗಳಿಸಿತು. ಎಸ್‌ಡಿ ಪಕ್ಷವು 1990ರ ಮಧ್ಯದಲ್ಲಿ ನವ ನಾಜಿ ಚಳುವಳಿಯಿಂದ ಮೂಡಿ ಬಂತು. ಕಳೆದ ಒಂಭತ್ತು ಚುನಾವಣೆಯಲ್ಲಿಯೂ ಅದು ತನ್ನ ಶೇಕಡಾವಾರು ಮತವನ್ನು ಹೆಚ್ಚಿಸಿಕೊಳ್ಳುತ್ತಲೇ ಬಂದಿದೆ. ವಲಸೆ ವಿರೋಧಿ ಪ್ರಚಾರದ ಮೂಲಕ ಹಿಂಸಾತ್ಮಕ ಅಪರಾಧಗಳ ಬೆದರಿಕೆಯನ್ನು ದುರ್ಬಳಕೆ ಮಾಡಿಕೊಳ್ಳುವಲ್ಲಿ ಸಮರ್ಥವಾಯಿತು. ವಿದ್ಯುತ್ ಬೆಲೆ ಏರಿಕೆ, ಶಾಲೆಗಳ ಕೊರತೆ, ಆರೋಗ್ಯ ಸೇವೆಗಾಗಿ ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ, ಮುಂತಾದ ಮತದಾರರ ಬವಣೆಗಳನ್ನು ವಲಸೆ ಮತ್ತು ಅಪರಾಧಗಳತ್ತ ತಿರುಗಿಸಲಾಯಿತು.

**ಬ್ರೆಜಿಲ್:** ಅಕ್ಟೋಬರ್ 2 ರಂದು ಬ್ರೆಜಿಲ್‌ನ ಜನರು ಅಧ್ಯಕ್ಷೀಯ ಚುನಾವಣೆಯ ಮೊದಲ ಸುತ್ತಿನಲ್ಲಿ ಮತ ಚಲಾಯಿಸಿದರು. 2019 ರಿಂದ ಅಧ್ಯಕ್ಷನಾಗಿದ್ದ ಜೈರ್ ಬೋಲ್ಸನಾರೋ ನಿರೀಕ್ಷೆಗಿಂತ ಉತ್ತಮ ಸಾಧನೆ ಮಾಡಿದರು. ತಿಂಗಳುಗಳ ಕಾಲ ಮಾಜಿ ಎಡಪಂಥೀಯ ಅಧ್ಯಕ್ಷ ಲೂಲಾ ಅವರು ಎರಡಂಕಿಯ ಮುನ್ನಡೆಯಲ್ಲಿದ್ದಾರೆ ಎಂದು ಸಮೀಕ್ಷೆಗಳು ಸಾರಿದವು. ಅಂತಿಮವಾಗಿ ಲೂಲಾ ಶೇ.48 ರಷ್ಟು ಮತ ಗಳಿಸಿದರೆ, ಬೋಲ್ಸನಾರೋ ಶೇ.43 ರಷ್ಟು ಮತ ಪಡೆದರು. ಬೋಲ್ಸನಾರೋ ಸರ್ಕಾರಿ ಯಂತ್ರಗಳ ದುರ್ಬಳಕೆ, ಭಾರಿ ಹಣ ಹಾಗೂ ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತಾತ್ಮಕ ಸಂಸ್ಥೆಗಳಿಗೆ ಬೆದರಿಕೆ ಒಡ್ಡಿದ್ದಾಗ್ಯೂ ಸಹ ಮೊದಲ ಸುತ್ತಿನಲ್ಲಿ ಲೂಲಾ ಅವರು 6 ಮಿಲಿಯನ್‌ಗಿಂತ ಹೆಚ್ಚು ಮತಗಳಿಸಿ ಗೆದ್ದಿದ್ದರು. ಕ್ರಿಶ್ಚಿಯನ್ ಧಾರ್ಮಿಕ ಬೋಧಕ (ಪೆಂಟೆಕೋಸ್ಟಲ್ ಪ್ರೀಚರ್ಸ್) ರನ್ನು ಬಳಸಿ ಜನರ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸಿ, ತನ್ನ ನಿಯಂತ್ರಣದಲ್ಲಿರುವ ಸರ್ಕಾರಿ ಮಾಧ್ಯಮ ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ಸುಳ್ಳುಸುದ್ದಿಗಳನ್ನು ಬೋಲ್ಸನಾರೋ ಹರಡಿದ್ದರು. ಚುನಾವಣೆ ತನ್ನ ವಿರುದ್ಧ ಹೋದರೆ ತಾನು ಆ ಫಲಿತಾಂಶವನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಬೋಲ್ಸನಾರೋ ಹೇಳಿದ್ದರು ಕೂಡ. ಯಾರೂ ಶೇ.50 ರಷ್ಟು ಮತ ಗಳಿಸದಿರುವ ಕಾರಣ, ಅಕ್ಟೋಬರ್ 30 ರದ್ದು ನಿರ್ಣಾಯಕ (ರನ್ ಆಫ್) ಚುನಾವಣೆ ನಡೆಯಲಿದೆ. ಮಧ್ಯ ಎಡಪಂಥೀಯ ಮಾಜಿ ರಾಶಜ್ಯಪಾಲರುಗಳು ಹಾಗೂ ಮಹಿಳೆಯರ ಹೆಚ್ಚಿನ ಮತಗಳನ್ನು ಪಡೆಯುವ ಭರವಸೆ ಲೂಲಾ ಹೊಂದಿದ್ದರೆ, ಕ್ರೈಸ್ತ ಮತದ ಧರ್ಮಬೋಧಕರು ಬೋಲ್ಸನಾರೋ ಪರವಾಗಿದ್ದಾರೆ.

**ಚಿಲಿ ಜನಮತಸಂಗ್ರಹ (ರೆಫೆರೆಂಡಮ್):** ಪಿನೋಷೆ ಯುಗದ ಸಂವಿಧಾನದ ಬದಲಿಗೆ ಹೊಸ ಸಂವಿಧಾನ ತರಬೇಕೆಂಬ ಯತ್ನವನ್ನು ಚಿಲಿಯ ಮತದಾರರು ತಿರಸ್ಕರಿಸಿದರು. ಜನಮತಸಂಗ್ರಹದಲ್ಲಿ ಸರಿಸುಮಾರು ಶೇ.62 ರಷ್ಟು ಜನರು ಪ್ರಗತಿಪರ ಕರಡು ಸಂವಿಧಾನದ ವಿರುದ್ಧ ಮತ ಚಲಾಯಿಸಿದರು. ತಿರಸ್ಕೃತ ಸಂವಿಧಾನವು ಚಿಲಿಯನ್ನು 'ಬಹುರಾಷ್ಟ್ರೀಯತೆ'ಯ ಪ್ರಭುತ್ವವೆಂದು ಘೋಷಿಸಿತ್ತು, ಚಿಲಿಯ ದೇಶೀಯ ಜನರ ಹಕ್ಕುಗಳನ್ನು ಮಾನ್ಯ ಮಾಡಿತ್ತು, ಗರ್ಭಪಾತದ ಹಕ್ಕು ಹಾಗೂ ಸರ್ಕಾರಿ ಹುದ್ದೆಗಳಲ್ಲಿ ಮಹಿಳೆಯರಿಗೆ ಕನಿಷ್ಠ ಶೇ.50 ರಷ್ಟು ಮೀಸಲಿಡಬೇಕೆಂಬ ಮಹಿಳಾ ಗುಂಪುಗಳ ಪ್ರಮುಖ ಹಕ್ಕೊತ್ತಾಯಗಳನ್ನು ಒಳಗೊಂಡಿತ್ತು. ಸಂವಿಧಾನದ ಒಂದು ಪರಿಚ್ಛೇದದ ಬಗ್ಗೆ ಸ್ವಲ್ಪ ಅನುಮಾನವಿದ್ದರೂ, ಪ್ರಾಯಶಃ ಹೊಸ ಸಂವಿಧಾನವು ತಮ್ಮ ಇಷ್ಟಕ್ಕೆ ತಕ್ಕಂತೆ ಇರಬಹುದು ಎಂಬ ನಂಬಿಕೆಯ ಮೇಲೆ, ಮತದಾರರು ಇಡೀ ಸಂವಿಧಾನವನ್ನೇ ತಿರಸ್ಕರಿಸಿದರು. ತಿರಸ್ಕೃತ ಸಂವಿಧಾನವು ಜಗತ್ತಿನಲ್ಲೇ ಅತ್ಯಂತ ಪ್ರಗತಿಪರ ಸಂವಿಧಾನಗಳಲ್ಲಿ ಒಂದಾಗಿರುತ್ತಿತ್ತು; ದೇಶೀಯ ಚಿಲಿಯನ್ನರಿಗೆ, ವಾತಾವರಣ ಹಾಗೂ ಮಹಿಳೆಯರಿಗೆ ಬಲವಾದ ಸುರಕ್ಷತೆಯನ್ನು ಒದಗಿಸುತ್ತಿತ್ತು; ಆರೋಗ್ಯದ ಆರೈಕೆ ಹಾಗೂ ವಸತಿ ಮುಂತಾದ ಸಾಮಾಜಿಕ

ಸೇವೆಗಳನ್ನು ಪೂರೈಸಲು ಪ್ರಭುತ್ವಕ್ಕೆ ಆದೇಶಿಸಬಹುದಾಗಿತ್ತು; ಈ ಸೋಲು ಈಗಿರುವ ಸರ್ವಾಧಿಕಾರಿಯುಗದ ಸಂವಿಧಾನವನ್ನು ಅನುಮೋದಿಸಿದಂತಾಗಲಿಲ್ಲ, ಏಕೆಂದರೆ ಜುಲೈನಲ್ಲಿ ನಡೆದ ಚುನಾವಣೆಯಲ್ಲಿ ಶೇಕಡಾ 74 ರಷ್ಟು ಚಿಲಿಯನ್ನರು, ತಿರಸ್ಕೃತವಾಗುವ ಸಂದರ್ಭದಲ್ಲಿ, ಹೊಸ ಸಂವಿಧಾನ ಪುನರ್ರಚನೆಯ ಪ್ರಕ್ರಿಯೆಗೆ ಬೆಂಬಲ ವ್ಯಕ್ತಪಡಿಸಿದ್ದರು. ಆದರೂ ಈ ಜನಮತಸಂಗ್ರಹಕ್ಕೆ ಆದ ಸೋಲು, ಖಂಡಿತವಾಗಿಯೂ ಚಿಲಿಯ ಎಡ ಹಾಗೂ ಪ್ರಗತಿಪರ ಶಕ್ತಿಗಳಿಗಾದ ಹಿಂಜರಿತವೇ ಸರಿ.

**ಪಾಕಿಸ್ತಾನ**ದಲ್ಲಿ ನಡೆದ ಉಪಚುನಾವಣೆಗಳಲ್ಲಿ, ವಿರೋಧ ಪಕ್ಷವಾದ ಪಾಕಿಸ್ತಾನ ತೆಹ್ರಿಕ್ ಪಕ್ಷವು ಪಾರ್ಲಿಮೆಂಟಿನಲ್ಲಿ ಬಹುಪಾಲು ಸ್ಥಾನಗಳನ್ನು ಗೆದ್ದುಕೊಂಡಿತು. ಇದು ಅಲ್ಲಿಯ ಆಳುವ ಪಕ್ಷಕ್ಕೆ ಒಂದು ದೊಡ್ಡ ಹೊಡೆತವೇ ಸರಿ. ಪಾಕಿಸ್ತಾನದ ಜನರು ತಾವು ಎದುರಿಸುತ್ತಿರುವ ಆರ್ಥಿಕ ಸಂಕಷ್ಟಗಳ ಬಗ್ಗೆ ಆತಂಕಗೊಂಡಿದ್ದಾರೆ ಮತ್ತು ಇನ್ನೊಂದು ಸಾರ್ವತ್ರಿಕ ಚುನಾವಣೆಯ ಬೇಡಿಕೆಗೆ ಬೆಂಬಲಿಸುತ್ತಿದ್ದಾರೆ ಎಂಬುದನ್ನು ಈ ಫಲಿತಾಂಶಗಳು ತೋರಿಸುತ್ತಿವೆ.

**ಯುನೈಟೆಡ್ ಕಿಂಗ್‌ಡಂ (ಯುಕೆ) ಬೆಳವಣಿಗೆಗಳು:** ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಕನ್ಸರ್ವೇಟಿವ್ ಪಕ್ಷದ ಸಂಸದರ ನಾಯಕರಾಗಿ ರಿಷಿ ಸುನಕ್ ಚುನಾಯಿತರಾಗಿದ್ದಾರೆ ಮತ್ತು ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಈ ವರ್ಷದಲ್ಲಿ ಅವರು ಮೂರನೇ ಪ್ರಧಾನಿಯಾಗಿದ್ದಾರೆ. ಬ್ರಿಟಿಷ್ ಇತಿಹಾಸದಲ್ಲೇ ಬಿಳಿಯರಲ್ಲದ ಪ್ರಧಾನಿ, ಎರಡು ಶತಮಾನಗಳ ರಾಜಾಧಿಪತ್ಯದಲ್ಲಿಯೇ ಅತ್ಯಂತ ಶ್ರೀಮಂತ ಹಾಗೂ ಕಿರಿಯ ಎಂದು ಹಲವಾರು ರೀತಿಯಲ್ಲಿ ಅವರನ್ನು ಬಣ್ಣಿಸಲಾಗುತ್ತಿದೆ. ಆದರೆ ಅವರು ಜಾಗತಿಕ ಬಂಡವಾಳದ ಆಯ್ಕೆ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಗೋಲ್ಡ್‌ಮನ್ ಸ್ಯಾಚ್ಸ್‌ನ ಮಾಜಿ ನೌಕರ, ಹೆಡ್ಜ್ ಫಂಡ್‌ನ ಮಾಜಿ ವ್ಯವಸ್ಥಾಪಕ (ಮ್ಯಾನೇಜರ್) ರಾಗಿದ್ದರು, ಒಟ್ಟಿನಲ್ಲಿ ಅವರು ಜಾಗತಿಕ ಹಣಕಾಸಿನ ಗುಂಪಿನವರು. "ಅಂತರ್‍ರಾಷ್ಟ್ರೀಯ ಹಣಕಾಸು ಬಂಡವಾಳವು ಆರ್ಥಿಕತೆಯ ಮೇಲೆ ಮಾತ್ರವಲ್ಲ, ಆಕ್ರಮಣಕಾರಿ ನವ ಉದಾರವಾದಿ ನೀತಿಗಳ ಪರವಾಗಿರುವ ಹಲವಾರು ದೇಶಗಳ ರಾಜಕೀಯ ಅಧಿಕಾರವನ್ನು ರೂಪಿಸುವಲ್ಲಿ ಕೂಡ ತನ್ನ ಹಿಡಿತವನ್ನು ಗಟ್ಟಿಗಳಿಸಿಕೊಳ್ಳುತ್ತಿದೆ" ಎಂದು ಪಕ್ಷದ 23 ನೇ ಮಹಾಧಿವೇಶನದ ರಾಜಕೀಯ ನಿರ್ಣಯವು ಗುರುತಿಸಿತ್ತು.

ಲಿಜ್ ಟ್ರಸ್ ಅವರು ಪ್ರಧಾನ ಮಂತ್ರಿಯಾಗಿದ್ದ 45 ದಿನಗಳ (ಬ್ರಿಟಿಷ್ ಚರಿತ್ರೆಯಲ್ಲೇ ಅತ್ಯಂತ ಕಡಿಮೆ) ಅವಧಿಯಲ್ಲಿ ಆ ದೇಶವು ತೀವ್ರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿತ್ತು ಮತ್ತು ಶ್ರೀಮಂತರಿಗೆ ಇನ್ನೂ ಹೆಚ್ಚಿನ ತೆರಿಗೆ ರಿಯಾಯಿತಿಗಳ ಘೋಷಣೆ ಮೂಲಕ ಉಲ್ಬಣವಾಗಿತ್ತು. ಈ ರಿಯಾಯಿತಿಗಳಿಗೆ ಹಣ ಒದಗಿಸಲು ಸರ್ಕಾರದ ಸಾಲವು ಭಾರಿ ಹೆಚ್ಚಾಗುವ ಅಗತ್ಯವಿತ್ತು. ಈ ಭಯದ ಕಾರಣದಿಂದ ಪೌಂಡಿನ ಮೌಲ್ಯದಲ್ಲಿ ಭಾರಿ ಕುಸಿತ ಕಾಣುವಂತಾಗಿತ್ತು.

ಈ ಸರ್ವತೋಮುಖ ಆರ್ಥಿಕ ಬಿಕ್ಕಟ್ಟು ಜನರ ಜೀವನೋಪಾಯದ ಮೇಲೆ ಹಾನಿಕಾರಕ ಪರಿಣಾಮ ಬೀರಿತ್ತು. ಈ ಪರಿಸ್ಥಿತಿಯಿಂದಾಗಿ ಕನ್ಸರ್ವೇಟಿವ್ ಪಕ್ಷದ ಜನಪ್ರಿಯತೆ ಕುಗ್ಗುತ್ತಾ ಹೋಗಿತ್ತು. ಜನಾಭಿಪ್ರಾಯದ ಪ್ರಕಾರ ಲೇಬರ್ ಪಕ್ಷವು ಬಹಳ ದೊಡ್ಡ ರೀತಿಯಲ್ಲಿ ಕನ್ಸರ್ವೇಟಿವ್ ಪಕ್ಷಕ್ಕಿಂತ ಹೆಚ್ಚು ಜನಮನ್ನಣೆ ಗಳಿಸಿತ್ತು. ಆದರೆ ಕನ್ಸರ್ವೇಟಿವ್ ಪಕ್ಷವು ಅನುಸರಿಸುತ್ತಿದ್ದ ಆರ್ಥಿಕ ನೀತಿಗಳಿಗೆ ಯೋಗ್ಯ ಪರ್ಯಾಯವನ್ನು ಒದಗಿಸುವಲ್ಲಿ ಲೇಬರ್ ಪಕ್ಷವು ಅಸಮರ್ಥವಾಗಿತ್ತು. ಕನ್ಸರ್ವೇಟಿವ್ ಸಂಸದರು ಹೊತ್ತಿಗೆ ಮುಂಚಿನ ಚುನಾವಣೆಯನ್ನು ಬಯಸುವುದಿಲ್ಲ ಎಂಬುದು ಸ್ಪಷ್ಟವಾಗಿತ್ತು, ಆದಕಾರಣ, ಹೊಸ ಮುಖಂಡನನ್ನು ಆರಿಸಿದರು ಮತ್ತು 2024 ರಲ್ಲಿ ಪಾರ್ಲಿಮೆಂಟಿನ ಅವಧಿ ಮುಗಿಯುವವರೆಗೆ ಅಧಿಕಾರಕ್ಕೆ ಅಂಟಿಕೊಳ್ಳಲು ಬಯಸುತ್ತಿದ್ದಾರೆ.

**ಶಾಂಘಾಯ್ ಸಹಕಾರ ಸಂಘ (ಎಸ್‌ಸಿಒ)ದ ಮುಖಂಡರ ಶೃಂಗಸಭೆ**

ಸೆಪ್ಟೆಂಬರ್ 15–16, 2022 ರಂದು ಸಮರ್ ಖಂಡದಲ್ಲಿ ನಡೆದ ಎಸ್‌ಸಿಒ ಮುಖಂಡರ ಶೃಂಗಸಭೆಯಲ್ಲಿ ಚರ್ಚೆ ಮಾಡಿದ ವಿಷಯಗಳಲ್ಲಿ ಬಹಳ ಮುಖ್ಯವಾದ ವಿಷಯವೆಂದರೆ ಸದಸ್ಯ ರಾಷ್ಟ್ರಗಳು ತಮ್ಮ ತಮ್ಮ ದೇಶಗಳ ನಾಣ್ಯ (ಕರೆನ್ಸಿ) ಗಳನ್ನು ಬಳಸಿಯೇ ವ್ಯಾಪಾರ ವೃದ್ಧಿ ಮಾಡಿಕೊಳ್ಳುವುದು ಎಂಬುದಾಗಿದೆ. ವ್ಯಾಪಾರದಲ್ಲಿ ರಾಷ್ಟ್ರೀಯ ನಾಣ್ಯ ಬಳಸಲು ಮತ್ತು ಸಂದಾಯ ಹಾಗೂ ಒಪ್ಪಂದಗಳ ವ್ಯವಸ್ಥೆಯೊಂದನ್ನು ಬೆಳೆಸುವ ಮಾರ್ಗಸೂಚಿಯೊಂದನ್ನು ಸಿದ್ಧಪಡಿಸುವುದು ಮುಂತಾದ ವಿಷಯಗಳ ಬಗ್ಗೆ ಇತ್ತೀಚಿನ ವರ್ಷಗಳಲ್ಲಿ ಎಸ್‌ಸಿಒ ಕಾರ್ಯನಿರತವಾಗಿತ್ತು. ಅಂತಹ ಮಾರ್ಗಸೂಚಿಯ ಒಂದು ಪ್ರಸ್ತಾಪವನ್ನು ಸಮರ್‌ಖಂಡದ ಸಭೆಯಲ್ಲಿ ಸದಸ್ಯ ರಾಷ್ಟ್ರಗಳ ಮುಖಂಡರು ಅಂಗೀಕರಿಸಿದರು. ಅಂತರ್‍ರಾಷ್ಟ್ರೀಯ ವ್ಯಾಪಾರಗಳಲ್ಲಿ ಡಾಲರ್ ಬಳಕೆಯನ್ನು ತಡೆಯುವಲ್ಲಿ ಇದು ಮೊದಲ ಹೆಜ್ಜೆಯಾಗಲಿದೆ.

ಡಾಲರ್ ಮೇಲಿನ ಅವಲಂಬನೆ ಒಳ್ಳೆಯದಕ್ಕಿಂತ ಹೆಚ್ಚು ಹಾನಿಯನ್ನೇ ಉಂಟುಮಾಡುತ್ತಿರುವುದರಿಂದ, ದೇಶಗಳು ಅದರ ಬಳಕೆಯನ್ನು ಕಡಿಮೆ ಮಾಡಲು ಪ್ರಯತ್ನ ಆರಂಭಿಸಿವೆ. ಐಎಂಎಫ್ ಪ್ರಕಟಿಸಿರುವ ಅಧಿಕೃತ ವಿದೇಶಿ ವಿನಿಮಯ ಮೀಸಲು ನಿಧಿ ಅಂಕಿ ಅಂಶಗಳ ಪ್ರಕಾರ ಡಾಲರ್ ಲೆಕ್ಕದಲ್ಲಿನ ತಮ್ಮ ಆಸ್ತಿ ಹಿಡುವಳಿಗಳನ್ನು ಕಡಿಮೆ ಮಾಡುತ್ತಿರುವುದು ಕಂಡುಬರುತ್ತಿದೆ. ಮಾರ್ಚ್ 2022 ರಲ್ಲಿ ಜಾಗತಿಕ ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿ ಡಾಲರಿನ ಶೇಕಡಾವಾರು ಪ್ರಮಾಣ ಶೇ.58.8 ಕ್ಕೆ ಇಳಿದಿದೆ, ಇದು 1995 ರ ನಂತರದಲ್ಲಿನ ಅತ್ಯಂತ ಕಡಿಮೆ ಮಟ್ಟದ್ದು.

**ಚೈನಾ ಕಮ್ಯುನಿಸ್ಟ್ ಪಕ್ಷ (ಸಿಪಿಸಿ) ದ ಮಹಾಧಿವೇಶನ**

ಚೈನಾ ಕಮ್ಯುನಿಸ್ಟ್ ಪಕ್ಷದ 20ನೇ ಮಹಾಧಿವೇಶನವು 2022 ರ ಅಕ್ಟೋಬರ್ 16 ರಿಂದ 22 ರವರೆಗೆ ಯಶಸ್ವಿಯಾಗಿ ನಡೆಯಿತು. 2021 ರ ಹೊತ್ತಿಗೆ (ಸಿಪಿಸಿ ಸ್ಥಾಪನೆಯ ಶತಮಾನೋತ್ಸವಕ್ಕೆ ಸರಿಹೊಂದುವಂತೆ) ಚೈನಾದಲ್ಲಿ ಕಡುಬಡತನವನ್ನು ಹೋಗಲಾಡಿಸುವ ಮತ್ತು ತಕ್ಕಮಟ್ಟಿಗೆ ಉತ್ತಮವಾದ ಸಮೃದ್ಧ ಸಮಾಜ ಸ್ಥಾಪನೆಯತ್ತ ಪ್ರಗತಿ ಸಾಧಿಸುವ, ತನ್ನ ಶತಾಬ್ದಿಯ ಎರಡು ಗುರಿಗಳಲ್ಲಿ ಒಂದನ್ನು ಸಿಪಿಸಿಯು ಕಳೆದ ಐದು ವರ್ಷಗಳಲ್ಲಿ ಸಾಧಿಸಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ದೇಶದ ಆರ್ಥಿಕತೆಯನ್ನು ಮುನ್ನಡೆಸುವಲ್ಲಿ ಸಿಪಿಸಿಯು ಸಮರ್ಥವಾಗಿದೆ. 2021 ರಲ್ಲಿ, ಚೈನಾದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) 17.7 ಟ್ರಿಲಿಯನ್ ಅಮೆರಿಕನ್ ಡಾಲರ್ ತಲುಪಿದೆ, ಅದು ಜಗತ್ತಿನ ಒಟ್ಟಾರೆ ಜಿಡಿಪಿಯ ಶೇ. 18.8 ರಷ್ಟಾಗಿದೆ. ಅದು 2013 ರಿಂದ 2021 ರವರೆಗೆ, ಶೇ.6.6 ರಷ್ಟು ಸರಾಸರಿ ವಾರ್ಷಿಕ ದರದಲ್ಲಿ ಅಭಿವೃದ್ಧಿ ಹೊಂದಿದೆ, ವಿಶ್ವದ ಸರಾಸರಿ ಬೆಳವಣಿಗೆಯಾದ ಶೇ.2.2 ರಷ್ಟನ್ನು ಮೀರಿ ಬೆಳೆಯಲು ಸಾಧ್ಯವಾಗಿದೆ. 2013 – 2021 ರ ಅವಧಿಯಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆಗೆ ಅದು ಶೇ.38.6 ಷ್ಟು ಕೊಡುಗೆ

ನೀಡಿದೆ. ಅದು ಜಿ–7 ದೇಶಗಳ (ಶ್ರೀಮಂತ ದೇಶಗಳ ಗುಂಪು) ಒಟ್ಟು ಬೆಳವಣಿಗೆಗಿಂತ ಹೆಚ್ಚಾಗಿದೆ. 2020 ರಲ್ಲಿ, ಮೊಟ್ಟ ಮೊದಲ ಬಾರಿಗೆ ಅಮೆರಿಕಾವನ್ನು ಹಿಂದೆ ಸರಿಸಿ ಜಗತ್ತಿನ ಅತ್ಯಂತ ದೊಡ್ಡ ವಾಣಿಜ್ಯ ದೇಶವಾಗಿ ಅದು ಹೊರಹೊಮ್ಮಿದೆ. 2021 ರಲ್ಲಿ ತನ್ನ ವಿದೇಶಿ ವ್ಯಾಪಾರದ ಪ್ರಮಾಣವನ್ನು 6.9 ಟ್ರಿಲಿಯನ್‌ಗೆ ವಿಸ್ತರಿಸಿ ತನ್ನ ಸ್ಥಾನವನ್ನು ಉಳಿಸಿಕೊಂಡಿದೆ.

ಚೈನಾದ ಒಟ್ಟು ರಾಷ್ಟ್ರೀಯ ತಲಾ ಆದಾಯವು ಕಳೆದ ವರ್ಷ 11.890 ಡಾಲರನ್ನು ತಲುಪಿದೆ, ಅದು 2012 ರಲ್ಲಿ ದಾಖಲಾದ ಅಂಕಿಯ ಎರಡು ಪಟ್ಟಾಗಿದೆ. ಆದಾಯದ ಬೆಳವಣಿಗೆ ಮತ್ತು ಶಿಕ್ಷಣ ಹಾಗೂ ಆರೋಗ್ಯ ಸೇವೆಗಳಲ್ಲಿನ ಅಭಿವೃದ್ಧಿಯಿಂದಾಗಿ, ಚೈನಾ ಜನಗಳ ಸರಾಸರಿ ಆಯುಸ್ಸು 2020 ರಲ್ಲಿ 77.9 ವರ್ಷಗಳಷ್ಟಾಗಿ ಜಾಗತಿಕ ಸರಾಸರಿಗಿಂತ 5.2 ವರ್ಷಗಳಷ್ಟು ಹೆಚ್ಚಾಗಿತ್ತು.

**ಪಕ್ಷದ ಸಂವಿಧಾನಕ್ಕೆ ತಿದ್ದುಪಡಿ ತರುವುದು** ಪಕ್ಷದ ಎಲ್ಲಾ ಮಹಾಧಿವೇಶನಗಳಲ್ಲಿ 1982 ರಿಂದ ಸರ್ವೇಸಾಮಾನ್ಯವಾಗಿದೆ. ಆಧುನಿಕತೆಯತ್ತ ಚೈನಾ ಮಾರ್ಗದ ಮೂಲಕ ಚೈನಾ ದೇಶದ ಎಲ್ಲಾ ರಂಗಗಳಲ್ಲಿ ಪುನಶ್ಚೇತನವನ್ನು ತ್ವರಿತಗೊಳಿಸುವುದು ಪಕ್ಷದ ಕೇಂದ್ರ ಉದ್ದೇಶವಾಗಿ ನಿರ್ಧರಿಸಲಾಗಿದೆ ಮತ್ತು ಈಗ ಪಕ್ಷದ ಪರಿಷ್ಕೃತ ಸಂವಿಧಾನದಲ್ಲಿಯೂ ಅಳವಡಿಸಲಾಗಿದೆ.

ಸಂವಿಧಾನಕ್ಕೆ ತಂದ ಮತ್ತೊಂದು ಪ್ರಮುಖ ತಿದ್ದುಪಡಿ ಹೀಗಿದೆ: 'ಸಾರ್ವಜನಿಕ ಒಡೆತನವು ಮೂಲಾಧಾರವಾಗಿರುವುದನ್ನೂ ಒಳಗೊಂಡಂತೆ ನಾನಾ ಸ್ವರೂಪದ ಒಡೆತನವನ್ನು ಜತೆಯಲ್ಲೇ ಬೆಳೆಸುವ ಮೂಲ ಸಮಾಜವಾದಿ ಆರ್ಥಿಕ ವ್ಯವಸ್ಥೆಯೊಂದಿಗೆ, ವಿವಿಧ ಸ್ವರೂಪಗಳ ವಿತರಣೆಯು ಜತೆಯಲ್ಲೇ ಇರುವ ಕೆಲಸಕ್ಕೆ ತಕ್ಕಂತೆ ವಿತರಣೆಯು ಮೂಲಾಧಾರವಾಗಿರುವ ವ್ಯವಸ್ಥೆ ಮತ್ತು ಸಮಾಜವಾದಿ ಮಾರುಕಟ್ಟೆ ಆರ್ಥಿಕತೆ, ಇವು ಚೈನಾದ ಲಕ್ಷಣಗಳೊಂದಿಗಿನ ಸಮಾಜವಾದದ ಪ್ರಧಾನ ಆಧಾರ ಸ್ತಂಭಗಳಾಗಿರುವ' ತತ್ವವನ್ನು ಅಳವಡಿಸಲಾಗಿದೆ.

ಪಕ್ಷದ ಸಂವಿಧಾನವನ್ನು ಈ ರೀತಿಯಾಗಿ ಪರಿಷ್ಕರಿಸಲು ನಿರ್ಧರಿಸಲಾಗಿದೆ: 2020 ರಿಂದ 2035 ರವರೆಗಿನ ಸಮಾಜವಾದಿ ಆಧುನೀಕರಣವನ್ನು ಸಾಕಾರಗೊಳಿಸುವ ಮೂಲಕ ಚೈನಾವನ್ನು ಎಲ್ಲಾ ರೀತಿಯಲ್ಲೂ ಒಂದು ಮಹಾನ್ ಆಧುನಿಕ ಸಮಾಜವಾದಿ ದೇಶವನ್ನಾಗಿ ಕಟ್ಟಬೇಕು; 2035 ರಿಂದ ಈ ಶತಮಾನದ ಮಧ್ಯಭಾಗದವರೆಗೆ ಚೈನಾವನ್ನು ಒಂದು ಸಮೃದ್ಧ, ಬಲಿಷ್ಠ, ಪ್ರಜಾಸತ್ತಾತ್ಮಕ, ಸಾಂಸ್ಕೃತಿಕವಾಗಿ ಮುಂದುವರಿದ, ಸಮರಸದ, ಮತ್ತು ಸುಂದರವಾದ ಮಹಾನ್ ಆಧುನಿಕ ಸಮಾಜವಾದಿ ದೇಶವನ್ನಾಗಿ ಕಟ್ಟಬೇಕು ಎನ್ನುವುದು ಶತಾಬ್ದಿಯ (2049 ರಲ್ಲಿ ಪಿಆರ್‌ಸಿ –ಪೀಪಲ್ಸ್ ರಿಪಬ್ಲಿಕ್ ಆಫ್ ಚೈನಾ – ಸ್ಥಾಪನೆಯಾದ ಶತಮಾನೋತ್ಸವಕ್ಕೆ ಸರಿಹೊಂದುವಂತೆ) ಎರಡನೆಯ ಗುರಿಯಾಗಿದೆ.

ಒಂದು ವಿಶಾಲವಾದ, ಸಮೃದ್ಧವಾಗುಳ್ಳ, ಮತ್ತು ಸಾರವತ್ತಾದ ಸಮಗ್ರ–ಪ್ರಕ್ರಿಯೆಯ ಜನತಾ ಪ್ರಜಾಪ್ರಭುತ್ವವನ್ನು ಬೆಳೆಸುವ ಕುರಿತ ಹೇಳಿಕೆಗಳನ್ನು ಪಕ್ಷದ ಸಂವಿಧಾನದಲ್ಲಿ ಸೇರಿಸಲು ಮಹಾಧಿವೇಶನವು ಒಪ್ಪಿಕೊಂಡಿದೆ; ಪ್ರಜಾಸತ್ತಾತ್ಮಕ ಚುನಾವಣೆಗಳಿಗಾಗಿ, ಸಮಾಲೋಚನೆಗಾಗಿ, ತೀರ್ಮಾನ ಮಾಡುವ ಸಲುವಾಗಿ, ಆಡಳಿತಕ್ಕಾಗಿ, ಮತ್ತು ಮೇಲ್ವಿಚಾರಣೆಗಾಗಿ ಗಟ್ಟಿಮುಟ್ಟಾದ ವ್ಯವಸ್ಥೆಗಳನ್ನು ಹಾಗೂ ಕಾರ್ಯವಿಧಾನಗಳನ್ನು ನೆಲೆಗೊಳಿಸಲು ಸಹ ಮಹಾಧಿವೇಶನ ಒಪ್ಪಿಕೊಂಡಿದೆ.

ಪಕ್ಷದ ಎಲ್ಲಾ ಹಂತಗಳ ಸಿಬ್ಬಂದಿಗಳಿಗೆ ನಿರ್ದೇಶನ ನೀಡಿ ಸವಲತ್ತುಗಳನ್ನು ಬಯಸುವ ಮನೋಭಾವವನ್ನು ಮತ್ತು ಆಚರಣೆಗಳನ್ನು ವಿರೋಧಿಸಬೇಕೆಂದು ಮತ್ತು ಭ್ರಷ್ಟಾಚಾರವನ್ನು ಕಡಿಮೆಮಾಡಲು ಸಾಂವಿಧಾನಿಕ ನಿಬಂಧನೆಗಳನ್ನು ಒಳಗೊಳ್ಳಲು ಪಕ್ಷದ ಶಿಸ್ತಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ತಿದ್ದುಪಡಿ ಮಾಡಲಾಗಿದೆ.

ನೂತನ ಕೇಂದ್ರ ಸಮಿತಿಯನ್ನು ಹಾಗೂ ಶಿಸ್ತು ಮತ್ತು ಪರಿವೀಕ್ಷಣೆಗಾಗಿ ಕೇಂದ್ರ ಆಯೋಗವನ್ನು ಮಹಾಧಿವೇಶನವು ಚುನಾಯಿಸಿದೆ. ನೂತನವಾಗಿ ಚುನಾಯಿತವಾದ ಕೇಂದ್ರ ಸಮಿತಿಯು ಷಿ ಜಿನ್‌ಪಿಂಗ್ ಅವರನ್ನು ಸಿಪಿಸಿಯ ಪ್ರಧಾನ ಕಾರ್ಯದರ್ಶಿಯಾಗಿ ಮರು ಆಯ್ಕೆ ಮಾಡಿತು, ಮತ್ತು ನೂತನ ಪೊಲಿಟ್ ಬ್ಯೂರೋವನ್ನೂ ಆಯ್ಕೆ ಮಾಡಿತು. ಪೊಲಿಟ್ ಬ್ಯೂರೋದ 7 ಸದಸ್ಯರ ಸ್ಥಾಯೀ ಸಮಿತಿ (ಪ್ರಧಾನ ಕಾರ್ಯದರ್ಶಿಯನ್ನೂ ಒಳಗೊಂಡಂತೆ) ಯೊಂದನ್ನು ಆಯ್ಕೆ ಮಾಡಲಾಯಿತು. ಅದರಲ್ಲಿ 4 ಜನರು ಹೊಸಬರು. ಷಿ ಜಿನ್‌ಪಿಂಗ್ ಅವರು ಕೇಂದ್ರ ಮಿಲಿಟರಿ ಆಯೋಗದ ಅಧ್ಯಕ್ಷರಾಗಿ ಮರು ಆಯ್ಕೆಯಾದರು.

## ರಾಷ್ಟ್ರೀಯ ಸನ್ನಿವೇಶ

### ಆರ್ಥಿಕತೆ

ಹೆಚ್ಚಾಗುತ್ತಿರುವ ಹಣದುಬ್ಬರ ಪ್ರವೃತ್ತಿಯಿಂದಾಗಿ ಭಾರತದ ಆರ್ಥಿಕತೆಯು ಆಳವಾದ ಬಿಕ್ಕಟ್ಟಿನೊಳಗೆ ಸಿಲುಕಿದೆ. ಈ ಹಿಂದೆ ಪ್ರಕಟಿಸಿದ ಬೆಳವಣಿಗೆಯ ಅಂದಾಜುಗಳನ್ನು ಎಲ್ಲಾ ಅಂತರ್‌ರಾಷ್ಟ್ರೀಯ ಸಂಸ್ಥೆಗಳು ಹಾಗೂ ಆರ್‌ಬಿಐ ಕೆಳಕ್ಕಿಳಿಸಿವೆ. ವಿಶ್ವ ಬ್ಯಾಂಕಿನ ಮೊದಲ ಅಂದಾಜು – ಆರ್ಥಿಕ ವರ್ಷ 23 ಕ್ಕೆ ಶೇ.8.7 ಬೆಳವಣಿಗೆ – ಎಂದಿತ್ತು. ಅದನ್ನು ಈ ಏಪ್ರಿಲ್‌ನಲ್ಲಿ ಶೇ.8 ಕ್ಕೆ, ನಂತರ ಶೇ.7.5 ಕ್ಕೆ ಮತ್ತು ಈಗ ಅಕ್ಟೋಬರ್‌ನಲ್ಲಿ ಶೇ.6.5 ಕ್ಕೆ ಇಳಿಸಿದೆ.

ವಿಶ್ವ ಬ್ಯಾಂಕ್ ತನ್ನ ಅಂದಾಜನ್ನು ಮೂರನೇ ಬಾರಿ ಇಳಿಸಿರುವಾಗಲೇ, ಆರ್‌ಬಿಐ ತನ್ನ ಅಂದಾಜನ್ನು ಶೇ.7.8 ರಿಂದ ಶೇ.7.2 ಕ್ಕೆ ಇಳಿಸಿ ಈಗ ಶೇ.7 ಕ್ಕೆ ಇಳಿಸಿತು. ಭಾರತದ ಜಿಡಿಪಿ ಬೆಳವಣಿಗೆಯು ಇನ್ನೂ ಕೆಳಕ್ಕೆ ಕುಸಿದು ಶೇ.4.7 ಕ್ಕೆ ತಲುಪಲಿದೆ ಎಂದು ಯುಎನ್‌ಸಿಟಿಎಡಿ (ಯುನೈಟೆಡ್ ನೇಷನ್ಸ್ ಕಾನ್ಫರೆನ್ಸ್ ಆನ್ ಟ್ರೇಡ್ ಅಂಡ್ ಡೆವಲಪ್‌ಮೆಂಟ್) ಎಚ್ಚರಿಸಿದೆ.

**ಕುಸಿಯುತ್ತಿರುವ ಕೈಗಾರಿಕಾ ಬೆಳವಣಿಗೆ:** ಅಕ್ಟೋಬರ್ 12 ರಂದು ದತ್ತಾಂಶ ಮತ್ತು ಕಾರ್ಯಕ್ರಮ ಜಾರಿ ಸಚಿವಾಲಯವು (ಮಿನಿಸ್ಟ್ರಿ ಆಫ್ ಸ್ಟ್ಯಾಟಿಸ್ಟಿಕ್ಸ್ ಅಂಡ್ ಪ್ರೋಗ್ರಾಮ್ ಇಂಪ್ಲಿಮೆಂಟೇಷನ್) ಬಿಡುಗಡೆ ಮಾಡಿದ ದತ್ತಾಂಶಗಳ ಪ್ರಕಾರ ಭಾರತದ ಕೈಗಾರಿಕಾ ಬೆಳವಣಿಗೆಯು 18 ತಿಂಗಳ ಹಿಂದಿನ ಕೆಳ ಮಟ್ಟಕ್ಕೆ ಕುಸಿದು, ಜುಲೈನಲ್ಲಿ ಶೇ.2.2 ಇದ್ದದ್ದು ಆಗಸ್ಟ್‌ನಲ್ಲಿ ಶೇ. –0.8 ಕ್ಕೆ ಇಳಿದಿದೆ. ಪ್ರಸ್ತುತ ಹಣಕಾಸು ವರ್ಷದ ಏಪ್ರಿಲ್‌ನಿಂದ ಆಗಸ್ಟ್‌ನ ಅವಧಿಯಲ್ಲಿ ಎಂಟು ಮೂಲಭೂತಸೌಕರ್ಯ ವಲಯಗಳಲ್ಲಿ – ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಿತ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್, ಮತ್ತು ವಿದ್ಯುಚ್ಛಕ್ತಿ ಉದ್ದಿಮೆಗಳಲ್ಲಿ – ಉತ್ಪಾದನಾ ಬೆಳವಣಿಗೆಯು ಇದೇ ಅವಧಿಯ ಕಳೆದ ವರ್ಷದಲ್ಲಿದ್ದ ಶೇ.19.4 ಕ್ಕೆ ಪ್ರತಿಯಾಗಿ ಈಗ ಶೇ.9.8 ಕ್ಕೆ ಕುಸಿದಿದೆ.

**ಏಕಾಏಕಿ ಕೆಳಕ್ಕೆ ಕುಸಿದ ವಿದೇಶಿ ವಿನಿಮಯ ಮೀಸಲು ನಿಧಿ:** ಆರ್‌ಬಿಐ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ ಭಾರತದ ವಿದೇಶಿ ವಿನಿಮಯ ಮೀಸಲು ನಿಧಿಯು ತೀವ್ರ ಕುಸಿತ ಕಂಡಿದೆ. ಕಳೆದ ವರ್ಷ ಇದ್ದ 642.4 ಬಿಲಿಯನ್ ಡಾಲರ್ ಮೀಸಲು ನಿಧಿಯು ಈ ಅಕ್ಟೋಬರ್ 14 ರ ಹೊತ್ತಿಗೆ 528.37 ಬಿಲಿಯನ್ ಡಾಲರಿನಷ್ಟಾಗಿ 2020 ಕ್ಕಿಂತಲೂ ಭಾರಿ ಕುಸಿತವಾಗಿದೆ.

**ರೂಪಾಯಿಯ ಪತನ:** ಈ ವರ್ಷ ರೂಪಾಯಿಯ ಮೌಲ್ಯವು ಡಾಲರ್ ಎದುರಿನಲ್ಲಿ ಶೇ.10 ಕಿಂತಲೂ ಹೆಚ್ಚು ಪತನವಾಗಿದೆ ಮತ್ತು ಈ ವಾರ ಮೊಟ್ಟ ಮೊದಲ ಬಾರಿಗೆ ಒಂದು ಡಾಲರಿಗೆ 83 ರೂಪಾಯಿಗಿಂತಲೂ ಕೆಳಗಿಳಿದಿದೆ. ರೂಪಾಯಿಯ ಮೌಲ್ಯ ಇನ್ನೂ ಕೆಳಕ್ಕಿಳಿಯದಂತೆ ತಡೆಯುವ ಆರ್‌ಬಿಐ ನ ಹಸ್ತಕ್ಷೇಪದಿಂದಾಗಿ ವಿದೇಶಿ ವಿನಿಮಯ ಮೀಸಲು ನಿಧಿಯಲ್ಲಿನ ಮೂರನೇ ಒಂದರಷ್ಟು ಕುಸಿತಕ್ಕೆ ಕಾರಣವಾಗಿದೆ.

**ಹೆಚ್ಚುತ್ತಿರುವ ವ್ಯಾಪಾರ ಕೊರತೆ:** ಭಾರತದ ಚಾಲ್ತಿ ಖಾತೆ ಕೊರತೆಯು ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿಯ ಶೇ.1.5 ರಷ್ಟು ಇದ್ದದ್ದು ಜೂನ್ ತ್ರೈಮಾಸಿಕದಲ್ಲಿ ಅದು ಹೆಚ್ಚಾಗುವ ಮೂಲಕ ಜಿಡಿಪಿಯ ಶೇ.2.8 ರಷ್ಟಾಗಿದೆ. ರೂಪಾಯಿ ಮೌಲ್ಯದ ಕುಸಿತವು ಆಮದನ್ನು ದುಬಾರಿಯಾಗಿಸಿದೆ. ಒಪಿಇಸಿ (ಆರ್ಗನೈಸೇಷನ್ ಆಫ್ ಪೆಟ್ರೋಲಿಯಂ ಎಕ್ಸ್‌ಪೋರ್ಟಿಂಗ್ ಕಂಟ್ರೀಸ್) ದೇಶಗಳು ತೈಲ ಉತ್ಪಾದನೆಯ ಮೇಲೆ ವಿಧಿಸಿದ ನಿರ್ಬಂಧದಿಂದಾಗಿ ಉಂಟಾದ ಜಾಗತಿಕ ತೈಲ ಬೆಲೆಗಳಲ್ಲಿನ ಅನಿಶ್ಚಿತತೆ ಮತ್ತು ಆಮದು ತೈಲದ ಮೇಲೆಯೇ ಅವಲಂಬಿತವಾಗಿರುವ ಭಾರತದ ಶೋಚನೀಯ ಸ್ಥಿತಿಯು ಈ ವ್ಯಾಪಾರ ಕೊರತೆಯನ್ನೂ ಇನ್ನೂ ಹೆಚ್ಚಿಸಲಿದೆ. ಇದರ ಜತೆಯಲ್ಲೇ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ತಮ್ಮ ಹಣವನ್ನು ಹಿಂತೆಗೆದುಕೊಳ್ಳುತ್ತಿರುವ ಕಾರಣ ದೇಶದಿಂದ ಹೊರಹೋಗುತ್ತಿರುವ ಹಣವು ಈ ಸೆಪ್ಟೆಂಬರಿನಲ್ಲಿ 7 ಬಿಲಿಯ ಡಾಲರಿನಷ್ಟು ಆಗಿ, ಅದರ ಒತ್ತಡವು ಭಾರತೀಯ ರೂಪಾಯಿ ಮೌಲ್ಯದ ಮೇಲೆ ಬೀರಿರುವ ಪರಿಣಾಮವು ಅಪಮೌಲ್ಯದ ಪ್ರಮಾಣವನ್ನು ಹೆಚ್ಚಿಸಲಿದೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯು ಈಗಾಗಲೇ ಗಗನಕ್ಕೇರಿರುವ ಕಾರಣ ಜನರ ಮೇಲಿನ ಹೊರೆಯು ಅಧಿಕವಾಗುವುದರಲ್ಲಿ ಸಂಶಯವೇ ಇಲ್ಲ.

**ಹದಗೆಡುತ್ತಿರುವ ಜನರ ಬದುಕುವ ಪರಿಸ್ಥಿತಿ**

ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟಿನ ತಕ್ಷಣದ ಪರಿಣಾಮವು ಜನರ ಜೀವನೋಪಾಯದ ಮೇಲೆ ಭಾರಿ ಕಷ್ಟಕೋಟಲೆಗಳನ್ನು ಹೊರಿಸಲಿದೆ. **ನಿರುದ್ಯೋಗ** ದರವು ಸೆಪ್ಟೆಂಬರಿನಲ್ಲಿ ಶೇ.6.43 ಇದ್ದದ್ದು ಈ ಹಬ್ಬಗಳ ಅಕ್ಟೋಬರಿನಲ್ಲಿ ಶೇ.7.86 ಕ್ಕೆ ಏರಿದೆ – ಗ್ರಾಮೀಣ ಶೇ.8.01 ಮತ್ತು ನಗರ ಶೇ.7.53 ಯಾಗಿದೆ – ಎಂದು ಸಿಎಂಐಇ (ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ) ಯ ಇತ್ತೀಚಿನ ಅಂಕಿಅಂಶಗಳು ಹೇಳುತ್ತವೆ.

ನಿರುದ್ಯೋಗ ಪರಿಸ್ಥಿತಿಯು ನಿರಾಶಾದಾಯಕವಾಗಿದ್ದಾಗ್ಯೂ, ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆರ್‌ಇಜಿಎಸ್) ಯನ್ನು ಇನ್ನಷ್ಟು ಕುಗ್ಗಿಸಲಾಗಿದೆ. 2022 ರ ಏಪ್ರಿಲ್ 1 ರಿಂದ ಅಕ್ಟೋಬರ್ 21 ರವರೆಗೆ 1.5 ಕೋಟಿ ಜನರ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಇಷ್ಟೂ ಸಾಲದೆಂಬಂತೆ, ಕೋವಿಡ್–19 ರ ಜೀವಹಿಂಡುವ ಅವಧಿಯಲ್ಲಿ ಕೂಡ, 2020–21 ರಲ್ಲಿ, ಕೆಲಸಕ್ಕಾಗಿ ಅರ್ಜಿ ಹಾಕಿದ್ದ 2.5 ಕೋಟಿ ಜನರನ್ನು ಹಿಂದಕ್ಕೆ ಕಳಿಸಲಾಗಿದೆ, ಮತ್ತು 2021–22 ರಲ್ಲಿ 1.73 ಕೋಟಿ ಜನರಿಗೆ ಕೆಲಸ ತಿರಸ್ಕರಿಸಲಾಗಿದೆ. ಅದಕ್ಕೆ ಮುಖ್ಯ ಕಾರಣವೇನೆಂದರೆ ಆ ಬಾಬತ್ತಿಗೆ ಸಾಕಷ್ಟು ಹಣ ಮಂಜೂರು ಮಾಡಿರಲಿಲ್ಲ ಮತ್ತು ಒಲ್ಲದ ಮನಸ್ಸಿನ ಹಣ ಬಿಡುಗಡೆಯಿಂದಾಗಿ ಒಂದು ವರ್ಷ ಕಾಲ ಬಾಕಿ ಉಳಿಸಿಕೊಳ್ಳಲಾಗಿತ್ತು. ಇದಕ್ಕೆ ಮೋದಿ ಸರ್ಕಾರದ ವಿವರಣೆ ಏನೆಂದರೆ ಈ ಯೋಜನೆಯು ಬೇಡಿಕೆ ಆಧಾರದ ಯೋಜನೆಯಾಗಿದೆ ಮತ್ತು ಬೇಡಿಕೆಗೆ ತಕ್ಕಂತೆ ಹಣ ಬಿಡುಗಡೆ ಮಾಡಲಾಗಿದೆ; ಕೆಲಸ ಕೊಡದೆ ಕೋಟ್ಯಾಂತರ ಜನರನ್ನು ಹಿಂದಕ್ಕೆ ಕಳಿಸಲಾಗಿದೆ ಎಂಬುದು ಸುಳ್ಳು ಎಂದು ಹೇಳಲಾಗುತ್ತಿದೆ. ಎಂಜಿಎನ್‌ಆರ್‌ಇಜಿಎಸ್ ಯೋಜನೆಗೆ ಹೆಚ್ಚಿನ ಅನುದಾನ ನೀಡಬೇಕು ಮತ್ತು ವರ್ಷಕ್ಕೆ ಕನಿಷ್ಠ 200 ದಿನಗಳ ಕೆಲಸವನ್ನು ನೀಡಬೇಕು.

ವಿಶ್ವ ಬ್ಯಾಂಕಿನ ಅಧ್ಯಯನ (ಬಡತನ ಮತ್ತು ಹಂಚಿಕೊಂಡ ಶ್ರೀಮಂತಿಕೆ, 2020) ದ ಪ್ರಕಾರ 2020 ರಲ್ಲಿ ಕೋವಿಡ್–19 ರ ಮಹಾಜಾಡ್ಯದಿಂದ ಜಗತ್ತಿನಲ್ಲಿ ಬಡತನದೊಳಕ್ಕೆ ಸಿಲುಕಿದ ಶೇ.80 ರಷ್ಟು ಜನರು ಭಾರತೀಯರಾಗಿದ್ದರು. ಈ ರೋಗದ ಕಾರಣ 2020 ರಲ್ಲಿ ಆರ್ಥಿಕ ನಷ್ಟಗಳನ್ನು ಅನುಭವಿಸಿ ಬಡವರಾದವರು ಜಗತ್ತಿನಲ್ಲಿ 7 ಕೋಟಿ ಇದ್ದರು, ಅದರಲ್ಲಿ 5.6 ಕೋಟಿ ಜನರು ಭಾರತೀಯರಾಗಿದ್ದರು.

**ಬೆಳೆಯುತ್ತಿರುವ ಹಸಿವು:** ಅಕ್ಟೋಬರ್ 14 ರಂದು ಬಿಡುಗಡೆಯಾದ ಜಾಗತಿಕ ಹಸಿವಿನ ಸೂಚ್ಯಾಂಕದಲ್ಲಿ ಭಾರತದ ಸ್ಥಾನವು 121 ರಲ್ಲಿ 107 ನೆಯದಾಗಿದೆ. ಅಪೌಷ್ಟಿಕತೆ, ಬೆಳವಣಿಗೆ ಕುಂಟಿತ ಮಕ್ಕಳು, ಕೃಶರಾದ ಮಕ್ಕಳು ಮತ್ತು ಮಕ್ಕಳ ಮರಣ, ಈ ನಾಲ್ಕು ಪೌಷ್ಟಿಕತೆ ಸೂಚಕಗಳ ಆಧಾರದಲ್ಲಿ ಹಸಿವಿನ ಸೂಚ್ಯಾಂಕವನ್ನು ಅಳೆಯಲಾಗುತ್ತದೆ. ಮೋದಿ ಸರ್ಕಾರವು ಈ ಸೂಚ್ಯಾಂಕವನ್ನು ತಿರಸ್ಕರಿಸಿತು, ಅದು ಎಲ್ಲಾ ಜಾಗತಿಕ ಸೂಚ್ಯಾಂಕಗಳನ್ನು ತಿರಸ್ಕರಿಸುತ್ತಾ ಬಂದಿದೆ, ಅಂಕಿಅಂಶಗಳ ಮೂಲವನ್ನೇ ಅದು ಪ್ರಶ್ನಿಸುತ್ತಿದೆ. ವಿಶ್ವ ಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯ ಜುಲೈ 2022 ರ ಆಹಾರ ಸುಭದ್ರತೆಯ ಸೂಚ್ಯಾಂಕವನ್ನು ಅಪೌಷ್ಟಿಕತೆಯ ಅಂಕಿಅಂಶಗಳಿಗೆ, ಮತ್ತು ಮಕ್ಕಳ ದೌರ್ಬಲ್ಯ ಹಾಗೂ ಬೆಳವಣಿಗೆ ಕುಂಟಿತ ಅಂಕಿ ಅಂಶಗಳನ್ನು ಇತ್ತೀಚಿನ ನ್ಯಾಷನಲ್ ಫ್ಯಾಮಿಲಿ ಅಂಡ್ ಹೆಲ್ತ್ ಸರ್ವೆ–5, 2019–21 ವರದಿಯಿಂದ ಮತ್ತು ವಿಶ್ವ ಸಂಸ್ಥೆಯ 2021 ರ ಅಂದಾಜುಗಳಿಂದ ಮಕ್ಕಳ ಮರಣ ದರ ಅಂಕಿ ಅಂಶಗಳನ್ನು ಭಾರತದ 2022 ರ ಸೂಚ್ಯಾಂಕವನ್ನು ಅಳೆಯಲು ಬಳಸಲಾಗಿದೆ.

**ಬೆನ್ನು ಮುರಿಯುವ ಬೆಲೆ ಏರಿಕೆ:** ಸೆಟೆಂಬರ್ 2022 ರಲ್ಲಿ ಭಾರತದ ಗ್ರಾಹಕ ಬೆಲೆ ಹಣದುಬ್ಬರವು ಶೇ.7.4 ಇತ್ತು. ಆರ್‌ಬಿಐ ನಿಗದಿಪಡಿಸಿದ ಹಣದುಬ್ಬರ ಶ್ರೇಣಿಯ ಗರಿಷ್ಠ ಮಿತಿಯಾದ ಶೇ.6 ನ್ನೂ ಅದು ಒಂಭತ್ತು ತಿಂಗಳಿಗೂ ಹೆಚ್ಚು ಕಾಲ ಮೀರಿತ್ತು. ಆಹಾರ ಹಣದುಬ್ಬರವು ಗ್ರಾಹಕ ಬೆಲೆ ಸೂಚ್ಯಾಂಕ (ಸಿಪಿಐ) ದ ಶೇ.39 ರಷ್ಟಿದೆ. ಗ್ರಾಮೀಣ ಭಾರತದ ಸಿಪಿಐ ನಗರ ಭಾರತದ ಸಿಪಿಐಗಿಂತ ಸ್ವಲ್ಪ ಮೇಲೆಯೇ ಇದೆ. ಅಂದರೆ ಗ್ರಾಮೀಣ ಜನರು ಹಣದುಬ್ಬರದ ಬಿಸಿಯನ್ನು ಹೆಚ್ಚು ಅನುಭವಿಸುತ್ತಿದ್ದಾರೆ.

ಸೆಪ್ಟೆಂಬರ್‌ನಲ್ಲಿನ ಸಿಪಿಐ ಹಣದುಬ್ಬರದ ಏರಿಕೆಯು ಬಹುಪಾಲು ತರಕಾರಿಗಳಿಂದ (ಶೇ.18.05), ಮಸಾಲೆ ಪದಾರ್ಥಗಳಿಂದ (ಶೇ.16.88), ಮತ್ತು ಏಕದಳ ಧಾನ್ಯ ಹಾಗೂ ಇತರ ಉತ್ಪನ್ನಗಳಿಂದ (ಶೇ.11.53) ಪ್ರಭಾವಿಸಲ್ಪಟ್ಟಿದೆ. ಏಕದಳ ಧಾನ್ಯ ಮತ್ತು ಇತರ ಉತ್ಪನ್ನಗಳ ಹಣದುಬ್ಬರ ಅಂಕಿಗಳು 2013 ರರಿಂದ ಮೇಲಕ್ಕೇ ಇವೆ. ಬಹಳ ಮುಖ್ಯವಾದ ಎರಡು ಏಕದಳ ಧಾನ್ಯಗಳಾದ ಪಡಿತರ ಜಾತಿಗೆ ಸೇರದ ಅಕ್ಕಿ ಮತ್ತು ಗೋಧಿಯು ಸೆಪ್ಟೆಂಬರ್‌ನಲ್ಲಿ ಅನುಕ್ರಮವಾಗಿ ಶೇ.9.2 ಮತ್ತು ಶೇ.17. ರಷ್ಟು ಹಣದುಬ್ಬರ ದರಗಳನ್ನು ಹೊಂದಿದ್ದವು.

**ಎಂಎಸ್‌ಪಿ (ಮಿನಿಮಮ್ ಸಪೋರ್ಟ್ ಪ್ರೈಸ್ – ಕನಿಷ್ಠ ಬೆಂಬಲ ಬೆಲೆ) ಯಲ್ಲಿ ಅಲ್ಪ ಏರಿಕೆ:** ಗೋಧಿಗೆ ಕನಿಷ್ಠ ಬೆಂಬಲ ಬೆಲೆಯನ್ನು 2022–23 ರಲ್ಲಿ ಒಂದು ಕ್ವಿಂಟಾಲಿಗೆ ರೂ.2,015 ಇದ್ದ ಬೆಲೆಗೆ ರೂ.110 ಏರಿಸಿ 2023–24 ಕ್ಕೆ ರೂ.2,125 ಮಾಡಿದರೆ, ಬಾರ್ಲಿಯ ಎಂಎಸ್‌ಪಿಯನ್ನು ರೂ.1,635 ಕ್ಕೆ ರೂ.100 ಸೇರಿಸಿ ರೂ.1,735 ಮಾಡಲಾಯಿತು. ಬೇಳೆ ಕಾಳುಗಳ ಎಂಎಸ್‌ಪಿಯನ್ನು ರೂ.105 ಏರಿಸಿ ರೂ.5,230 ರಿಂದ ರೂ.5,335

ಮಾಡಲಾಯಿತು ಹಾಗೂ ಕುಸುಂಬೆ ಹೂವಿನ (ಸ್ಯಾಫ್ಲವರ್) ಎಂಎಸ್‌ಪಿಯನ್ನು ರೂ.209 ಏರಿಸಿ ರೂ.5,441 ರಿಂದ ತೂ.5,650 ಮಾಡಲಾಯಿತು. ರೇಪ್ ಬೀಜ ಹಾಗೂ ಸಾಸಿವೆಯ ಎಂಎಸ್‌ಪಿಯನ್ನು ರೂ.400 ಏರಿಸಿ ರೂ.5,050 ರಿಂದ ರೂ.5,450 ಕ್ಕೆ ಏರಿಸಲಾಯಿತು. ಇವೆಲ್ಲವೂ ಹಣದುಬ್ಬರದಿಂದ ಉಂಟಾದ ಅವುಗಳನ್ನು ಬೆಳೆಯಲು ಮಾಡಿದ ವೆಚ್ಚಗಳಲ್ಲಿನ ಏರಿಕೆಗೆ ಹೋಲಿಸಿದರೆ ಬಹಳ ಕಡಿಮೆ. ಅವುಗಳ ಸಂಗ್ರಹವನ್ನು ಗಣನೀಯ ಪ್ರಮಾಣದಲ್ಲಿ ಏರಿಸದಿದ್ದರೆ ಈಗ ಘೋಷಣೆ ಮಾಡಿದ ಎಂಎಸ್‌ಪಿಯಲ್ಲಿನ ಅಲ್ಪ ಏರಿಕೆಯೂ ಅರ್ಥವಿಲ್ಲದ್ದು. ವೆಚ್ಚದ ಮೇಲೆ ಶೇ.50 ರಷ್ಟು ಎಂಎಸ್‌ಪಿ ಏರಿಸುವುದಾಗಿ ಮತ್ತು ಸರ್ಕಾರವು ಕಡ್ಡಾಯವಾಗಿ ಬೆಳೆಸಂಗ್ರಹ ಮಾಡುವುದಾಗಿ ನೀಡಿದ್ದ ಭರವಸೆಗಳನ್ನು ಮೋದಿ ಸರ್ಕಾರ ಈಡೇರಿಸದೆ ಮೋಸ ಮಾಡಿದೆ.

ಇದು ಅಪಾಯಕಾರಿ ಪರಿಸ್ಥಿತಿ. ಪ್ರತಿದಿನ ಬದುಕಲು ಅಗತ್ಯವಿರುವ ಕನಿಷ್ಠ ಬೇಳೆ/ಹಿಟ್ಟು/ಅನ್ನದ ಆಹಾರಗಳು ಬಹುಪಾಲು ಜನರಿಗೆ ದಕ್ಕದಾಗಿದೆ. ಹಣದುಬ್ಬರವು ಹೆಚ್ಚಾಗಿದ್ದು ಏರುತ್ತಲೇ ಇರುವಾಗ,ಕೇಂದ್ರ ಉಗ್ರಾಣಗಳಲ್ಲಿನ ಆಹಾರದ ದಾಸ್ತಾನು ಈ ವರ್ಷಗಳಲ್ಲೇ ಅತ್ಯಂತ ಕಡಿಮೆ ಇದೆ. ಇದು ಭಾರತವನ್ನು ಅಪಾಯಕಾರಿ ರೀತಿಯಲ್ಲಿ ಆಹಾರ ಕೊರತೆಯ ದೇಶವನ್ನಾಗಿ ಮಾಡುವುದಲ್ಲದೇ ಆಹಾರ ಸುಭದ್ರತೆಯ ಬಿಕ್ಕಟ್ಟಿನತ್ತ ತಳ್ಳುತ್ತದೆ ಕೂಡ.

**ಅಸಮಾನತೆಯಲ್ಲಿನ ಅಸಹ್ಯಕರ ಬೆಳವಣಿಗೆ:** ಜನರ ಬದುಕು ಶೋಚನೀಯವಾಗುತ್ತಿರುವಾಗಲೇ ಉಳ್ಳವರು ಮತ್ತು ಇಲ್ಲದವರ ನಡುವಿನ ಆರ್ಥಿಕ/ಸಂಪತ್ತಿನ ಅಸಮಾನತೆಗಳು ಜುಗುಪ್ಸೆ ಹುಟ್ಟಿಸುವಷ್ಟು ಹೆಚ್ಚಾಗುತ್ತಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಶ್ರೀಮಂತರಿಗೆ ಸರಿ ಸುಮಾರು 11 ಲಕ್ಷ ರೂಪಾಯಿಗಳಷ್ಟು ತೆರಿಗೆ ರಿಯಾಯಿತಿ ಹಾಗೂ ಸಾಲ ಮನ್ನಾ ಮಾಡಿರುದೇ ಆಗಿದೆ. ಹತೋಟಿ ಮೀರಿದ ಹಣದುಬ್ಬರವು ಒಂದೆಡೆ ಭಾರಿ ಲಾಭಗಳನ್ನು ತಿನ್ನಿಸುತ್ತಿವೆ, ಮತ್ತೊಂದೆಡೆ, ತಯಾರಾದ ಆಹಾರ ವಸ್ತುಗಳ ಮೇಲೆ ಜಿಎಸ್‌ಟಿ ವಿಧಿಸುತ್ತಿರುವುದು ಹೆಚ್ಚುತ್ತಿರುವ ಅಸಮಾನತೆಗಳಿಗೆ ಕಾರಣವಾಗಿವೆ. ಮೋದಿ ಸರ್ಕಾರವು ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸಬೇಕು ಮತ್ತು ಜನರಿಗೆ ನೆರವು ನೀಡಬೇಕು.

### ತೀವ್ರಗೊಳ್ಳುತ್ತಿರುವ ಕೋಮು ಧ್ರುವೀಕರಣ

ಈ ಆರ್ಥಿಕ ಸರ್ವನಾಶದ ಕಾರಣದಿಂದ ಉಂಟಾದ ಜನರ ಸಂಕಟ ಹಾಗೂ ಅವರ ಗೋಳನ್ನು ಕಡೆಗಣಿಸುತ್ತಿರುವ ಮೋದಿಯವರು ಜನರ ನಡುವೆ ಕೋಮುವಾದಿ ವಿಭಜನೆಯನ್ನು ತೀವ್ರಗೊಳಿಸಲು ಸ್ವತಃ ಅವರೇ ನಾಯಕತ್ವ ವಹಿಸಿದ್ದಾರೆ. ಬದರಿನಾಥ್, ಅಯೋಧ್ಯಾ ಮತ್ತಿತರ ಧಾರ್ಮಿಕ ಆಚರಣೆಗಳಲ್ಲಿ ಹಾಗೂ ಧಾರ್ಮಿಕ ಸಮಾರಂಭಗಳಲ್ಲಿ ತೊಡಗಿರುವ ಮೋದಿಯವರ ಸುದ್ದಿಸಮಾಚಾರಗಳಿಂದ ಮಾಧ್ಯಮಗಳು ತುಂಬಿತುಳುಕುತ್ತಿವೆ. ಒಂದಲ್ಲ ಒಂದು ಕಾರಣಕ್ಕಾಗಿ ಮುಸ್ಲಿಮರನ್ನು ಗುರಿಯಾಗಿಸುವುದು ವಾಡಿಕೆಯಾಗುತ್ತಿದೆ. ಮುಸ್ಲಿಮರನ್ನು ಭೀಕರ ದೈಹಿಕ ದಾಳಿಗೆ ಒಳಗಾಗಿಸುವುದು ಹೆಚ್ಚಾಗುತ್ತಿದೆ. ವಿಷಪೂರಿತ ದ್ವೇಷ ಮತ್ತು ಹಿಂಸೆಯ ಪ್ರಚಾರ ಹರಡುತ್ತಿರುವುದು ಬೆಳೆಯುತ್ತಲೇ ಇದೆ. ಗುಜರಾತಿನ ಖೇಡಾದಲ್ಲಿ ಮಫ್ತಿಯಲ್ಲಿರುವ ಪೋಲಿಸರು ಮುಸ್ಲಿಂ ಯುವಜನರ ಮೇಲೆ ಸಾರ್ವಜನಿಕವಾಗಿ ಛಡಿಏಟು ಹೊಡೆಯುತ್ತಿರುವ ಸಂಗತಿಯು ನಿಜಕ್ಕೂ ಆಘಾತಕಾರಿಯಾಗಿದೆ.

**ಬಿಲ್ಕಿಸ್ ಬಾನೋ ಪ್ರಕರಣ:** ಬಿಲ್ಕಿಸ್ ಬಾನೋ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ 11 ಅಪರಾಧಿಗಳನ್ನು 'ಸನ್ನಡತೆ'ಯ ಆಧಾರದಲ್ಲಿ ಕ್ಷಮಾದಾನ ಮಾಡಿ ಜೈಲಿನಿಂದ ಬಿಡುಗಡೆ ಮಾಡಿದ ಮೋದಿ ಸರ್ಕಾರದ ಕ್ರಮವು ಅತ್ಯಂತ ಆಘಾತಕಾರಿ. ಅತ್ಯಾಚಾರ, ಕೊಲೆ ಹಾಗೂ ಅತ್ಯಂತ ಹೀನ ಅಪರಾಧ ಮಾಡಿದವರು ಎಂದು ಈ 11 ಜನರಿಗೆ ಶಿಕ್ಷೆಯಾಗಿತ್ತು. ಬಿಲ್ಕಿಸ್ ಬಾನೋ ಎದುರಿನಲ್ಲೇ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಘಟನೆಗಳು ನಡೆದಿವೆ, ಮತ್ತು ಐದು ತಿಂಗಳ ಗರ್ಭಿಣಿಯಾಗಿದ್ದ ಅವರ ಮೇಲೂ ಸಾಮೂಹಿಕ ಅತ್ಯಾಚಾರ ನಡೆದಿದೆ. ಆ ಮಹಿಳೆಯ ಮೇಲಿನ ಸಾಮೂಹಿಕ ಅತ್ಯಾಚಾರ ನಡೆದ ನಂತರ ಅವರ ಮೂರು ತಿಂಗಳ ಹೆಣ್ಣುಮಗುವನ್ನು ಹಾಗೂ ಇತರ ಹನ್ನೆರಡು ಜನರನ್ನು ಕೊಲೆ ಮಾಡಲಾಗಿದೆ. ಬಿಲ್ಕಿಸ್ ಬಾನೋ ಅದಾಗಲೇ ಸತ್ತಿರಬಹುದೆಂದು ಎಣಿಸಿ ಹಾಗೆ ಬಿಟ್ಟು ಹೋಗಿದ್ದರು.

ಸಿಬಿಐನ ವಿರೋಧದ ನಡುವೆಯೂ ಕೇಂದ್ರ ಸರ್ಕಾರವು ಬಿಡುಗಡೆಗೆ ಅನುಮತಿ ನೀಡಿತ್ತು ಎಂದು ಗುಜರಾತ್ ರಾಜ್ಯ ಸರ್ಕಾರವು ಸುಪ್ರೀಂಕೋರ್ಟಿನಲ್ಲಿ ಅಫಿಡವಿಟ್ ಸಲ್ಲಿಸಿತ್ತು. ಹೀನಾಯ ಹಾಗೂ ಗಂಭೀರ ಅಪರಾಧ ಮಾಡಿದವರಿಗೆ ಶಿಕ್ಷೆಯ ಕ್ಷಮಾದಾನ ಮಂಜೂರು ಮಾಡಲು ಮೋದಿಯವರ ಕೇಂದ್ರ ಸರ್ಕಾರ ಬಯಸಿದೆ. ಮುಸ್ಲಿಂ ಅಲ್ಪಸಂಖ್ಯಾತ ಸಮುದಾಯವನ್ನು ಗುರಿಮಾಡುವುದು ಅಪರಾಧವಲ್ಲ ಎಂಬುದು ನಿಜಕ್ಕೂ ಅಸಾಧಾರಣವಾದ ಭೀಕರ ಸಂಗತಿ. ಹೀನಾಯ ಪಾತಕ ಮಾಡಿದವರನ್ನು ಪ್ರೋತ್ಸಾಹಿಸುವ ಮೂಲಕ ಮೋದಿ ಸರ್ಕಾರ ಕೋಮು ಧ್ರುವೀಕರಣವನ್ನು ತೀವ್ರಗೊಳಿಸಲು ಎಂತಹ ಅಮಾನವೀಯ ನೀಚ ಮಟ್ಟಕ್ಕೂ ಇಳಿಯಲು ಸಿದ್ಧವಿದೆ ಎನ್ನುವುದನ್ನು ಸಾಬೀತುಮಾಡಿದೆ.

ಅಂತಹ ಕೋಮು ಧ್ರುವೀಕರಣದ ವಿರುದ್ಧ ವಿಶಾಲ ನೆಲೆಯಲ್ಲಿ ಜಾತ್ಯತೀತ ಶಕ್ತಿಗಳನ್ನು ಒಗ್ಗೂಡಿಸಬೇಕೆಂಬ ಪಕ್ಷದ 23 ನೇ ಮಹಾಧಿವೇಶನದ ಕರೆಯನ್ನು ಬಲಪಡಿಸುವ ಪ್ರಯತ್ನಗಳನ್ನು ಸಾಕಾರಗೊಳಿಸಬೇಕಿದೆ.

### ಒಕ್ಕೂಟವಾದವನ್ನು ದುರ್ಬಲಗೊಳಿಸಲಾಗುತ್ತಿದೆ

ನಮ್ಮ ಸಂವಿಧಾನದ ಮೂಲಭೂತ ಲಕ್ಷಣಗಳಲ್ಲಿ ಒಂದಾದ ಒಕ್ಕೂಟವಾದವನ್ನು, ಮತ್ತು ಚುನಾಯಿತ ರಾಜ್ಯ ಸರ್ಕಾರಗಳ ಹಕ್ಕುಗಳನ್ನು ದುರ್ಬಲಗೊಳಿಸುವ ಯತ್ನಗಳು ಮುಂದುವರಿಯುತ್ತಲೇ ಇವೆ. ಭಾರತದಲ್ಲಿ ಏಕೀಕೃತ ಪ್ರಭುತ್ವ ಸಂರಚನೆಯನ್ನು ಹೇರಬೇಕೆಂಬುದು ಆರ್‌ಎಸ್.ಎಸ್/ಬಿಜೆಪಿಯ ಯತ್ನವಾಗಿದೆ. ಕಾನೂನು ಮತ್ತು ಸುವ್ಯವಸ್ಥೆಯು ರಾಜ್ಯಗಳಡಿ ಬರುತ್ತದೆ. ಪೋಲಿಸರಿಗೆ 'ಒಂದು ದೇಶ ಒಂದು ಸಮವಸ್ತ್ರ' ಎಂಬ ಮೋದಿಯವರ ಕರೆಯು ಇದನ್ನು ಉಲ್ಲಂಘಿಸುತ್ತದೆ.

**ಹಣಕಾಸಿನ ಒಕ್ಕೂಟವಾದ:** ಕೇಂದ್ರ ಸರ್ಕಾರವು ಇತ್ತೀಚೆಗೆ ರಾಜ್ಯ ಸರ್ಕಾರಗಳ ವಿತ್ತೀಯ ಕೊರತೆಯ ವ್ಯಾಪ್ತಿಯನ್ನು ಮಾರ್ಪಡಿಸಿ, ಅವುಗಳ ವಿತ್ತೀಯ ಕ್ಷೇತ್ರವನ್ನು ಮತ್ತೂ ಕುಗ್ಗಿಸಿದೆ. ಈಗ ರಾಜ್ಯಗಳ ಬಜೆಟೇತರ ಸಾಲಪಡೆಯುವ ಅವಕಾಶವನ್ನೂ ವಿತ್ತೀಯ ಕೊರತೆಯ ಲೆಕ್ಕಾಚಾರದಲ್ಲಿ ಸೇರಿಸಬೇಕೆಂದು ಕೇಂದ್ರ ಸರ್ಕಾರ ಬಯಸುತ್ತಿದೆ, ಆ ಮೂಲಕ ಅನುಮತಿಯ ಅಡಿಯಲ್ಲಿ ರಾಜ್ಯಗಳು ಪಡೆಯಬಹುದಾಗಿದ್ದ ಸಹಜ ಸಾಲಗಳನ್ನು ತೀವ್ರವಾಗಿ ಕಡಿತಗೊಳಿಸಲಾಗುತ್ತದೆ. ಅದೇ ಸಮಯದಲ್ಲಿ, ಕೇಂದ್ರ ಸರ್ಕಾರವು ತಾನು ವಾರ್ಷಿಕವಾಗಿ ಎತ್ತುತ್ತಿದ್ದ (ಪಡೆಯುತ್ತಿದ್ದ) ಎರಡರಿಂದ ಮೂರು ಲಕ್ಷ ರೂಪಾಯಿಗಳ ಬಜೆಟೇತರ ಸಾಲಗಳನ್ನು ತನ್ನ ವಿತ್ತೀಯ ಕೊರತೆ ಲೆಕ್ಕಾಚಾರದಿಂದ ಹೊರಗಿಡುತ್ತಿದೆ.

**ಹಿಂದಿ ಹೇರಿಕೆಯನ್ನು ತಿರಸ್ಕರಿಸಿ:** ಕೇಂದ್ರೀಯ ವಿಶ್ವವಿದ್ಯಾಲಯಗಳನ್ನೂ ಒಳಗೊಂಡಂತೆ ಎಲ್ಲಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಹಿಂದಿಯನ್ನು ಬೋಧನೆಯ ಮಾಧ್ಯಮವನ್ನಾಗಿ ಕಡ್ಡಾಯವಾಗಿ ಬಳಸಬೇಕು ಎಂದು ಅಮಿತ್ ಶಾ ನೇತೃತ್ವದ ಅಧಿಕೃತ ಭಾಷೆಗಳ ಸಂಸದೀಯ ಸಮಿತಿಯು ಶಿಫಾರಸುಮಾಡಿದೆ. ಭಾರತದ ಅಸಾಧಾರಣವಾದ ಹಾಗೂ ಶ್ರೀಮಂತ ಭಾಷಾ ವೈವಿಧ್ಯತೆಯ ಮೇಲೆ ಆರ್‌ಎಸ್‌ಎಸ್ ನ "ಹಿಂದು, ಹಿಂದಿ, ಹಿಂದೂಸ್ತಾನ್" ಎಂಬ

ಗುರಿಯ ಹೇರಿಕೆಯನ್ನು ಯಾರೂ ಒಪ್ಪಲಾಗದು. ನಮ್ಮ ಸಂವಿಧಾನದ 8ನೇ ಶೆಡ್ಯೂಲಿನಲ್ಲಿ ಪಟ್ಟಿ ಮಾಡಿರುವ ಎಲ್ಲಾ 22 ಅಧಿಕೃತ ಭಾಷೆಗಳನ್ನು ಸಮಾನವಾಗಿ ಕಾಣಬೇಕು ಮತ್ತು ಪ್ರೋತ್ಸಾಹಿಸಬೇಕು.

**ಶಿಕ್ಷಣ ವಲಯದಲ್ಲಿ ಹಸ್ತಕ್ಷೇಪ:** ಶಿಕ್ಷಣವು ಸಹವರ್ತಿ ಪಟ್ಟಿ (ಕನ್‌ಕರೆಂಟ್ ಲಿಸ್ಟ್) ಯಲ್ಲಿದ್ದು ಶಿಕ್ಷಣ ನೀತಿಗಳ ವಿಷಯದಲ್ಲಿ ಚುನಾಯಿತ ರಾಜ್ಯ ಸರ್ಕಾರಗಳಿಗೆ ಸಮಾನ ಅವಕಾಶವಿರುತ್ತದೆ. ಕೇಂದ್ರ ಸರ್ಕಾರವು, ಕೋವಿಡ್ ನಿರ್ಬಂಧಗಳ ಸಂದರ್ಭದಲ್ಲಿ, ಏಕಪಕ್ಷೀಯವಾಗಿ ಪ್ರಕಟಿಸಿದ ಹೊಸ ಶಿಕ್ಷಣ ನೀತಿ – 2020 ರಾಜ್ಯಗಳ ಹಕ್ಕುಗಳನ್ನು ಪೂರಾ ಉಲ್ಲಂಘಿಸಿದೆ ಮತ್ತು ರಾಜ್ಯಗಳ ಅಭಿಪ್ರಾಯಗಳನ್ನು ಪರಿಗಣಿಸಲಿಲ್ಲ.

ರಾಜ್ಯಗಳಿಗೆ ಬಿಜೆಪಿ ನೇಮಕ ಮಾಡಿದ ರಾಜ್ಯಪಾಲರ ನಡುವೆ ಮುಂದುವರಿಯುತ್ತಿರುವ ತಿಕ್ಕಾಟಗಳು, ಅವರು ಆ ರಾಜ್ಯಗಳ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ ಕಾರ್ಯನಿರ್ವಹಿಸುವುದರಿಂದ, ಉಂಟುಮಾಡಿದ ಗಂಭೀರ ಸಮಸ್ಯೆಗಳನ್ನು ಬಗೆಹರಿಸಬೇಕಾದ ಅಗತ್ಯವಿದೆ. ಯುಜಿಸಿ (ಯೂನಿವರ್ಸಿಟಿ ಗ್ರಾಂಟ್ಸ್ ಕಮಿಷನ್ – ವಿಶ್ವವಿದ್ಯಾಲಯಗಳ ಅನುದಾನ ಆಯೋಗ) ನಿಬಂಧನೆಗಳನ್ನು ಕೇಂದ್ರ ಕಾನೂನೆಂದು ಪರಿಗಣಿಸಿ ಎಲ್ಲಾ ರಾಜ್ಯಗಳು ಅನುಸರಿಸಬೇಕೆಂದು ಇತ್ತೀಚೆಗೆ ಸುಪ್ರೀಂಕೋರ್ಟ್ ನೀಡಿದ ತೀರ್ಪನ್ನು ಮರುಪರಿಶೀಲಿಸಬೇಕಿದೆ. ಯುಜಿಸಿ ನಿಬಂಧನೆಗಳು ಕೆಳಗಣ ಶಾಸನಗಳಾಗಿವೆ; ಸಂಸತ್ತು ಅಂಗೀಕರಿಸಿದ ಯುಜಿಸಿ ಕಾಯಿದೆಯಡಿ ಅಳವಡಿಸಿದ ನಿಯಮಗಳಾಗಿವೆ. ನಿಯಮಗಳು (ರೂಲ್ಸ್) ಜಾರಿಗೆ ತರುವ ಕೆಲಸಗಳಾಗಿವೆಯಷ್ಟೆ ಮತ್ತು ನಮ್ಮ ಸಂವಿಧಾನದ ಸಮವರ್ತಿ ಪಟ್ಟಿಯ ಅಡಿಯಲ್ಲಿ ಬರುವ ವಿಷಯಗಳಲ್ಲಿ ರಾಜ್ಯ ವಿಧಾನ ಸಭೆಗಳು ಅಂಗೀಕರಿಸಿದ ಕಾನೂನುಗಳನ್ನು ಅಥವಾ ರಾಜ್ಯ ಸರ್ಕಾರಗಳ ಕಾಯಿದೆಗಳನ್ನು ಅವು ರದ್ದುಮಾಡಲು ಅಥವಾ ತಳ್ಳಿಹಾಕಲು ಸಾಧ್ಯವಿಲ್ಲ.

ತೆಲಂಗಾಣದಲ್ಲಿ ಇತ್ತೀಚೆಗೆ ಭಾರಿ ಮೊತ್ತದ ಹಣವನ್ನು ನೀಡುವ ಮೂಲಕ ಟಿಆರ್‌ಎಸ್ ಶಾಸಕರನ್ನು ಕಾನೂನುಬಾಹಿರವಾಗಿ ಅಪಹರಿಸಿ ಚುನಾಯಿತ ರಾಜ್ಯ ಸರ್ಕಾರಗಳನ್ನು ಅಸ್ಥಿರಗೊಳಿಸುವ ಬಿಜೆಪಿಯ ಯತ್ನಗಳು ಮುಂದುವರಿಯುತ್ತಲೇ ಇರುವುದನ್ನು ಕಾಣುತ್ತೇವೆ.

**ನ್ಯಾಯಾಂಗ**

ಭಾರತದ ಸಂವಿಧಾನವು ಭರವಸೆ ನೀಡಿದ ನಾಗರಿಕರ ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆಯನ್ನು ಯುಎಪಿಎ (ಅನ್‌ಲಾಫುಲ್ ಆಕ್ಟಿವಿಟೀಸ್ ಪ್ರಿವೆಂಷನ್ ಅಮೆಂಡ್‌ಮೆಂಟ್ – ಕಾನೂನುಬಾಹಿರ ಚಟುವಟಿಕೆಗಳ ತಡೆ ತಿದ್ದುಪಡಿ) ಅಡಿಯಲ್ಲಿ ಬಂಧನಕ್ಕೊಳಗಾಗಿರುವ ಡಾ.ಜಿ.ಎನ್.ಸಾಯಿಬಾಬಾ ಮತ್ತಿತರರ ಪ್ರಕರಣದಲ್ಲಿ ಮತ್ತೊಮ್ಮೆ ಎದ್ದು ಕಾಣುವಂತಾಗಿದೆ. ಈ ಬಂಧನವನ್ನು ಊರ್ಜಿತವಲ್ಲದ್ದು ಎಂದು ಅಕ್ಟೋಬರ್ 14 ರಂದು ಮುಂಬಯಿ ಹೈಕೋರ್ಟ್ ಘೋಷಿಸಿದೆ, ಬಿಡುಗಡೆಗೆ ಆದೇಶ ನೀಡಿದೆ ಕೂಡ. ಆದೇಶ ಬಂದ ಕೆಲವೇ ಗಂಟೆಗಳಲ್ಲಿ, ಮಹಾರಾಷ್ಟ್ರ ಸರ್ಕಾರವು ಸುಪ್ರೀಂಕೋಟಿಗೆ ಅರ್ಜಿ ಸಲ್ಲಿಸಿ ತಕ್ಷಣ ಬಿಡುಗಡೆಗೆ ತಡೆ ನೀಡಬೇಕೆಂದು ಕೋರಿದೆ. ಮರುದಿನವೇ, ಶನಿವಾರ ರಜಾ ದಿನವಾಗಿದ್ದಾಗ್ಯೂ ಕೂಡ, ಒಂದು ವಿಶೇಷ ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಮುಂಬಯಿ ಹೈಕೋರ್ಟಿನ ತೀರ್ಪನ್ನು ಅನೂರ್ಜಿತಗೊಳಿಸಿತು. ಅಂಗವಿಕಲ ವ್ಯಕ್ತಿಯಾಗಿರುವ ಮತ್ತು ಗಾಲಿಕುರ್ಚಿಯನ್ನು ಬಳಸುತ್ತಿರುವ ಜಿ.ಎನ್.ಸಾಯಿಬಾಬಾ ಅವರು ಹಲವಾರು ರೋಗಗಳಿಂದ ಬಳಲುತ್ತಿದ್ದಾರೆ. ಬಂಧನಕ್ಕೊಳಗಾಗಿದ್ದ ಮತ್ತೊಬ್ಬರು ಪಾಂಡು ನರೋಟೆ ಎನ್ನುವವರು ಅನಾರೋಗ್ಯದಿಂದ ಜೈಲಿನಲ್ಲೇ ಸಾವನ್ನಪ್ಪಿದ್ದಾರೆ. ಈ ಹಿಂದೆ ಜೈಲಿನಲ್ಲಿರುವಾಗಲೇ ಫಾದರ್ ಸ್ಟಾನ್ ಸ್ವಾಮಿಯವರು ಅನಾರೋಗ್ಯದಿಂದ ಸಾವನ್ನಪ್ಪಿದ ದುರಂತವು ಯಾರ ಪರಿಗಣನೆಗೂ ಬಾರದೆ ಹೋಯಿತು.

ಉಮರ್ ಖಲಿದ್‌ಗೆ ದೆಹಲಿ ಹೈಕೋರ್ಟ್ ಮತ್ತೊಮ್ಮೆ ಜಾಮೀನು ಇರಾಕರಿಸಿತು ಮತ್ತು ಅದೇ ರೀತಿಯಲ್ಲಿ ಜ್ಯೋತಿ ಜಗ್‌ತಾಪ್‌ಗೆ ಮುಂಬಯಿ ಹೈಕೋರ್ಟ್.

ನ್ಯಾಯಾಧೀಶರ ಬಡ್ತಿ ಹಾಗೂ ನೇಮಕಾತಿಗಾಗಿ ಸುಪ್ರೀಂ ಕೋರ್ಟಿನ ಕೊಲಿಜಿಯಮ್ ಸರ್ವಾನುಮತದಿಂದ ಶಿಫಾರಸುಮಾಡಿದ ನ್ಯಾಯಾಧೀಶರ ಪಟ್ಟಿಯನ್ನು ಬಿಜೆಪಿ ಸರ್ಕಾರವು ಅಂಗೀಕರಿಸದೆ ವಿಳಂಬ ಮಾಡುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ನ್ಯಾಯಾಧೀಶರ ನೇಮಕಾತಿ ಮಾಡುವ ಅಧಿಕಾರ ಸರ್ಕಾರಕ್ಕೆ ಮಾತ್ರವೇ ಇದೆ ಎಂದು ಇತ್ತೀಚೆಗೆ ಕಾನೂನು ಸಚಿವರು ಹೇಳಿದ್ದಾರೆ. ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ನ್ಯಾಯಮೂರ್ತಿ ಮುರಳೀಧರ್ ಅವರ ನೇಮಕಾತಿಯನ್ನು ತಡೆಹಿಡಿದಿರುವುದು ಅಂತಹ ಒಂದು ನಿದರ್ಶನವಾಗಿದೆ. ಫೆಬ್ರವರಿ 2020 ರಲ್ಲಿ ದೆಹಲಿಯಲ್ಲಾದ ಕೋಮು ಹಿಂಸೆಗೆ ಪ್ರಚೋದನಕಾರಿ ಭಾಷಣ ಮಾಡಿದವರ ವಿರುದ್ಧ ಕ್ರಮ ತೆಗೆದುಕೊಳ್ಳದಿರುವುದು ದೆಹಲಿ ಪೋಲಿಸರ ಹಾಗೂ ಕೇಂದ್ರ ಸರ್ಕಾರದ ಘೋರ ಅಪರಾಧ ಎಂದು ವ್ಯಾಖ್ಯಾನ ಮಾಡಿದ ನ್ಯಾಯಮೂರ್ತಿ ಮುರಳೀಧರ್ ಅವರನ್ನು ದೆಹಲಿ ಹೈಕೋರ್ಟಿನಿಂದ ಶಿಷ್ಟಾಚಾರಕ್ಕೆ ವಿರುದ್ಧವಾಗಿ ವರ್ಗಾಯಿಸಲಾಯಿತು.

**ಪೆಗಾಸಸ್ ಗೂಢಚಾರ ಜಾಲ:** ಇಸ್ರೇಲಿ ಬೇಹುಗಾರಿಕೆ ಉಪಕರಣ ಸಂಸ್ಥೆ ಎನ್‌ಎಸ್‌ಓ ಗ್ರೂಪಿನಿಂದ "ಬೇರೆಡೆಯಲ್ಲಿ ಬಳಸಿದ ಉಪಕರಣದ ವಿವರಕ್ಕೆ ಹೋಲುವ ಆ ಕಂಪನಿಯ ಪ್ರಮುಖ ಪೆಗಾಸಸ್ ಬೇಹುಗಾರಿಕೆ ತಂತ್ರಾಂಶ (ಸಾಫ್ಟ್‌ವೇರ್) ವನ್ನು ಗೂಢಚಾರ ಸಂಸ್ಥೆ (ಇಂಟೆಲಿಜೆನ್ಸ್ ಬ್ಯೂರೋ) ಯು ಖರೀದಿಸಿದೆ ಎಂದು ಆಮದು ದಾಖಲೆಗಳು ತೋರಿಸುತ್ತವೆ" ಎನ್ನುವುದನ್ನು ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಮಾಡುವ ಯೋಜನೆ (ಆರ್ಗನೈಸಡ್ ಕ್ರೈಮ್ ಅಂಡ್ ಕರಪ್ಷನ್ ರಿಪೋರ್ಟಿಂಗ್ ಪ್ರಾಜೆಕ್ಟ್ – ಒಸಿಸಿಆರ್‌ಪಿ) ಯಿಂದ ಆದ ಹೊಸ ತನಿಖೆಯು ಬಯಲು ಮಾಡಿದೆ. 2017 ರಲ್ಲಿ ಭಾರತ ಸರ್ಕಾರವು ಪೆಗಾಸಸ್ ಬೇಹುಗಾರಿಕೆ ಉಪಕರಣವನ್ನು ಖರೀದಿಸಿದೆ ಎಂದು ಈ ಹಿಂದೆ ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದ್ದನ್ನು ಅದು "ಉದ್ರೇಕಕಾರಿ ಸುದ್ದಿ" ಎಂದು ಮೋದಿ ಸರ್ಕಾರವು ನಿರ್ಲಜ್ಜವಾಗಿ ತಳ್ಳಿಹಾಕಿತ್ತು. ಈ ವಿಷಯದ ತನಿಖೆಯಲ್ಲಿ ಸರ್ಕಾರವು ತನ್ನ ಜತೆ ಸಹಕರಿಸಲಿಲ್ಲ ಎಂದು ಸುಪ್ರೀಂಕೋರ್ಟ್ ಹೇಳಿದೆ. ಬಹಿರಂಗವಾದ ಎಲ್ಲಾ ಸಂಗತಿಗಳನ್ನು ನ್ಯಾಯಾಂಗವು ಗಮನಿಸಬೇಕು ಮತ್ತು ಇಂತಹ ಅಸಂವಿಧಾನಿಕ ನಿರ್ಲಜ್ಜ ಕಾರ್ಯಗಳಿಗೆ ಮೋದಿ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಬೇಕು, ಏಕೆಂದರೆ, ನಮ್ಮ 23 ನೇ ಮಹಾಧಿವೇಶನದಲ್ಲಿ ನಮ್ಮ ವರದಿಯು ಹೇಳಿದಂತೆ "ಇದು ಕಣ್ಗಾವಲು ಸರ್ಕಾರದ ಕೃತ್ಯವಾಗಿದೆ."

**ಚುನಾವಣಾ ಆಯೋಗ**

ಚುನಾವಣಾ ಆಯೋಗವು ಆಳುವ ಬಿಜೆಪಿಯ ರಾಜಕೀಯ ಕಾರ್ಯಸೂಚಿಯನ್ನು ಮುನ್ನೆಲೆಗೆ ತರುವಲ್ಲಿ ಇತ್ತೀಚೆಗೆ ಹೆಚ್ಚು ಉತ್ಸುಕವಾಗಿದೆ. ಮಾದರಿ ನೀತಿ ಸಂಹಿತೆಯನ್ನು ತಿದ್ದುಪಡಿ ಮಾಡಿ ರಾಜಕೀಯ ಪಕ್ಷಗಳಿಗೆ ಮಾರ್ಗದರ್ಶನ ನೀಡುವ ಪ್ರಸ್ತಾಪವನ್ನು ಮುಂದಿಟ್ಟಿದೆ: ತಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ನೀಡಿದ ಭರವಸೆಗಳಿಗೆ ಹಣಕಾಸನ್ನು ಹೇಗೆ ಒದಗಿಸುತ್ತೀರಿ ಮತ್ತು ಅವು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಮೇಲೆ ಯಾವ ಪರಿಣಾಮ ಬೀರುತ್ತದೆ ಎನ್ನುವುದನ್ನು ರಾಜಕೀಯ ಪಕ್ಷಗಳು ಸ್ಪಷ್ಟಗೊಳಿಸಬೇಕು ಎಂದು ನಿರ್ದೇಶಿಸಿದೆ. ಇದು ಸಂಪೂರ್ಣವಾಗಿ ಅಸಮರ್ಥನೀಯ ನಡೆಯಾಗಿದೆ.

ಚುನಾವಣಾ ಆಯೋಗವು ಮುಕ್ತ ಹಾಗೂ ನ್ಯಾಯಯುತ ಚುನಾವಣೆಗಳನ್ನು ನಡೆಸಬೇಕು ಎಂದು ನಮ್ಮ ಸಂವಿಧಾನವು ಆದೇಶಿಸುತ್ತದೆ. ರಾಜಕೀಯ ಪಕ್ಷಗಳು ಜನರಿಗೆ ನೀಡುವ ಭರವಸೆಗಳ ಮೂಲಕ ಪ್ರಕಟಿಸುವ ನೀತಿಗಳು ಹಾಗೂ ಕಲ್ಯಾಣ ಕ್ರಮಗಳನ್ನು ನಿಯಂತ್ರಿಸುವ ಕೆಲಸ ಚುನಾವಣಾ ಆಯೋಗದ್ದಲ್ಲ. ಪ್ರಜಾಪ್ರಭುತ್ವದಲ್ಲಿ ಇದು ರಾಜಕೀಯ ಪಕ್ಷಗಳ ಸಂಪೂರ್ಣವಾದ ವಿಶೇಷಾಧಿಕಾರವಾಗಿರುತ್ತದೆ.

ಚುನಾವಣಾ ಆಯೋಗವು ಏಪ್ರಿಲ್ ನಲ್ಲಿ ಸುಪ್ರೀಂಕೋರ್ಟಿಗೆ ಸಲ್ಲಿಸಿದ ಅಫಿಡವಿಟ್‌ನಲ್ಲಿ ರಾಜಕೀಯ ಪಕ್ಷಗಳ ನೀತಿನಿರೂಪಣೆಗಳ ನಿರ್ಧಾರಗಳನ್ನು ಆಯೋಗವು ನಿಯಂತ್ರಿಸಲು ಸಾಧ್ಯವಿಲ್ಲ ಮತ್ತು ಹಾಗೆ ಮಾಡುವುದು "ಅಧಿಕಾರಗಳನ್ನು ಮೀರಿದಂತಾಗುತ್ತದೆ" ಎಂದು ಹೇಳಿದೆ.

ಜನರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ಜನರ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ನೀತಿ ನಿರೂಪಣೆ ಮಾಡುವ ರಾಜಕೀಯ ಪಕ್ಷಗಳ ಹಕ್ಕನ್ನು ನಿರ್ಬಂಧಿಸುವ ಅಥವಾ ನಿಯಂತ್ರಿಸುವ ಯಾವುದೇ ಪ್ರಯತ್ನವನ್ನು ಪ್ರಬಲವಾಗಿ ವಿರೋಧಿಸುತ್ತೇವೆ ಎಂದು ಪಕ್ಷವು ಚುನಾವಣಾ ಆಯೋಗಕ್ಕೆ ಬರೆದಿದೆ.

ಚುನಾವಣೆ ನಡೆಯಲಿರುವ ಹಿಮಾಚಲ ಪ್ರದೇಶ ಹಾಗೂ ಗುಜರಾತ್ ರಾಜ್ಯಗಳಲ್ಲಿ ಎಲ್ಲಾ ಕಡೆಗಳಲ್ಲೂ ಹಲವಾರು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡುತ್ತಿರುವ ಮೋದಿಯವರು ಜನರ ಹಣವನ್ನು ವೆಚ್ಚಮಾಡಿ ಜನರಿಗೆ ಉಡುಗೊರೆಗಳ ಮತ್ತು 'ದೀಪಾವಳಿ ಬಹುಮಾನಗಳ' ಭರವಸೆಗಳನ್ನು ನೀಡುತ್ತಿದ್ದಾರೆ. ಚುನಾವಣಾ ಆಯೋಗವು ಇಲ್ಲೆಲ್ಲೂ ಅದಕ್ಕೆ ಆಕ್ಷೇಪಣೆ ಎತ್ತಲಿಲ್ಲ ಆದರೆ ಅದು ಇತರ ಎಲ್ಲಾ ರಾಜಕೀಯ ಪಕ್ಷಗಳು ಜನರಿಗೆ ನೆರವಿನ ಆಶ್ವಾಸನೆಗಳನ್ನು ನೀಡದಂತೆ ನಿರ್ಬಂಧ ಹೇರಲು ಬಯಸುತ್ತಿದೆ. ಯಾವುದೇ ಕಾರಣಕ್ಕೂ ಇದನ್ನು ಒಪ್ಪಲು ಸಾಧ್ಯವಿಲ್ಲ.

**ಗುಜರಾತ್ ಒಪ್ಪಂದಗಳು:** ಚುನಾವಣಾ ಆಯೋಗವು 1000 ಕಾರ್ಪೊರೇಟ್ ಸಂಸ್ಥೆಗಳೊಂದಿಗೆ ಒಪ್ಪಂದಗಳಿಗೆ ಸಹಿಮಾಡಿ ಅವರಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳು ಚುನಾವಣೆಯಲ್ಲಿ ಭಾಗವಹಿಸುತ್ತಾರೋ ಇಲ್ಲವೋ ಎಂದು ನಿಗಾ ವಹಿಸಿ ಮತದಾನ ಮಾಡದವರ ಹೆಸರುಗಳನ್ನು ಪ್ರಕಟಿಸಬೇಕೆಂಬ ಅತಿರೇಕದ ಕ್ರಮಕ್ಕೆ ಮುಂದಾಗಿದೆ. 'ಹೆಸರು ಹೇಳಿ ಅವಮಾನಿಸುವ' ನೀತಿ (ನೇಮ್ ಅಂಡ್ ಶೇಮ್ ಪಾಲಿಸಿ) ಯು ಕಡ್ಡಾಯ ಮತದಾನ ಮಾಡಬೇಕೆಂಬ ಬಲಪ್ರಯೋಗದ ನಡೆಯಾಗುತ್ತದೆ. ಇದು ಮತದಾನದ ಹಕ್ಕನ್ನು ಖಾತ್ರಿಪಡಿಸುವ ಸಂವಿಧಾನದ ಪರಿಚ್ಛೇದ 326 ರ ಸ್ಪಷ್ಟ ಉಲ್ಲಂಘನೆಯಾಗುತ್ತದೆ. 2015 ರಲ್ಲಿ ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವರು ಸುಪ್ರೀಂಕೋರ್ಟಿಗೆ ಒಂದು ಅಫಿಡವಿಟ್ ಸಲ್ಲಿಸಿ 'ಕಡ್ಡಾಯ ಮತದಾನದ ಪದ್ಧತಿಯನ್ನು ಜಾರಿ ಮಾಡಿದರೆ, ಅದು ದೇಶದಲ್ಲಿ ಅಪ್ರಜಾಸತ್ತಾತ್ಮಕ ವಾತಾವರಣವನ್ನು ಸೃಷ್ಟಿಸಲು ಕಾರಣವಾಗುತ್ತದೆ' ಎಂದು ಹೇಳಿದ್ದರು. ಮತದಾನದ ಹಕ್ಕು ಎಂದರೆ ಮತದಾನ ಮಾಡದಿರುವ ಹಕ್ಕನ್ನೂ ಒಳಗೊಳ್ಳುತ್ತದೆ ಎಂದು ಕೇಂದ್ರ ಸರ್ಕಾರ ಕೂಡ ಸುಪ್ರೀಂಕೋರ್ಟಿಗೆ ಸಲ್ಲಿಸಿದ ಪತ್ರದಲ್ಲಿ ವಾದ ಮಾಡಿದೆ. ಮತದಾನದ ಹಕ್ಕನ್ನು ಮೂಲಭೂತ ಕರ್ತವ್ಯವೆಂದು ಹೇರಲು ಸಾಧ್ಯವಿಲ್ಲ ಎಂದು ಆಯೋಗವು ಹೇಳಿರುವುದನ್ನು ಚುನಾವಣಾ ಸುಧಾರಣೆಗಳಿಗೆ ಸಂಬಂಧಪಟ್ಟ ಕಾನೂನು ಆಯೋಗದ ವರದಿಯನ್ನು ಕೂಡ ಕೇಂದ್ರ ಸರ್ಕಾರವು ಉಲ್ಲೇಖಿಸಿದೆ.

ಮತದಾನದ ಹಕ್ಕನ್ನು ಮೂಲಭೂತ ಕರ್ತವ್ಯವೆಂದು ಬಲಾತ್ಕರಿಸುವಲ್ಲಿ ಕಾರ್ಪೊರೇಟ್ ಸಂಸ್ಥೆಗಳನ್ನು ಒಳಗೊಂಡ ಚುನಾವಣಾ ಆಯೋಗದ ಈಗಿನ ಪ್ರಯತ್ನವು ಸಂವಿಧಾನ ಬಾಹಿರವಾದುದು. ಅಷ್ಟೇ ಅಲ್ಲದೆ,, ಅದಾಗಲೇ ಚುನಾವಣಾ ಬಾಂಡುಗಳ ಮೂಲಕ ಅನಾಮಧೇಯ ಕಾರ್ಪೊರೇಟ್ ಸಂಸ್ಥೆಗಳ ನಿಧಿ ಪಡೆಯುವ ವಿವಾದಾತ್ಮಕ ಹಿನ್ನೆಲೆಯಲ್ಲಿ ಚುನಾವಣೆಯನ್ನು ನಡೆಸಲು ಕಾರ್ಪೊರೇಟ್ ಸಂಸ್ಥೆಗಳನ್ನು ಚುನಾವಣಾ ಆಯೋಗವು ಮತ್ತೂ ಒಳಗೊಳ್ಳುತ್ತಿದೆ. ಮತ್ತೂ ಮುಂದುವರಿದು, ಈಗಿನ ಇವಿಎಂ ಯಂತ್ರಗಳ ಮತ ಎಣಿಕೆ ಪ್ರಕ್ರಿಯೆಯಲ್ಲಿ ಈ ಹಿಂದಿನ ಮತ ಪತ್ರಗಳನ್ನು ಕಲಸುವ (ಬೆರೆಸುವ) ಪದ್ಧತಿಯನ್ನು ಕೈಬಿಡಲಾಗಿದೆ. ಇವಿಎಂ ಮತ ಎಣಿಕೆಯು ಪ್ರತಿಯೊಂದು ಮತಗಟ್ಟೆಯ ಮತದಾನದ ಚಿತ್ರಣವನ್ನು ಪಾರದರ್ಶಕವಾಗಿ ತೋರಿಸುತ್ತದೆ. ಕಾರ್ಪೊರೇಟ್ ಮೇಲ್ವಿಚಾರಣೆಯ ಈ ವಿಧಾನದಿಂದ ಕಾರ್ಪೊರೇಟ್ ಸಂಸ್ಥೆಗಳ ಕೆಲಸಗಾರರನ್ನು ಪರಿಶೀಲಿಸಲು ಅವಕಾಶ ನೀಡಿ ಅವರಿಗೆ ಕಿರುಕುಳ ನೀಡಲು ಮತ್ತು ಅವರ ವಿರುದ್ಧ ಪ್ರತೀಕಾರದ ಕ್ರಮ ತೆಗೆದುಕೊಳ್ಳಲು ಅನುವು ಮಾಡಿಕೊಡುತ್ತದೆ. ಇದು ಗುಪ್ತ ಮತದಾನವನ್ನು ಅಣಕು ಮಾಡುತ್ತದೆ.

ಅದೂ ಸಾಲದೆಂಬಂತೆ, ಹಿಮಾಚಲ ಪ್ರದೇಶದಲ್ಲಿ ಚುನಾವಣಾ ವೇಳಾ ಪಟ್ಟಿಯನ್ನು ಘೋಷಣೆ ಮಾಡುವಾಗ ಗುಜರಾತ್ ವಿಧಾನ ಸಭೆ ಚುನಾವಣಾ ದಿನಗಳನ್ನು ನಿಗದಿ ಮಾಡದೆ ಮಾದರಿ ನೀತಿ ಸಂಹಿತೆ ಜಾರಿಯಾಗದಂತೆ ನೋಡಿಕೊಂಡ ಚುನಾವಣಾ ಆಯೋಗದ ನಡೆಯು ಮೋದಿಯವರು ಗುಜರಾತಿನಲ್ಲಿ ಇನ್ನೂ ಒಂದಿಷ್ಟು ಮತದಾರರನ್ನು ಓಲೈಸಲು 'ಬಹುಮಾನಗಳನ್ನು' ಘೋಷಿಸಲು ಅನುಕೂಲವಾಗಲಿ ಎಂಬುದು ಸ್ಪಷ್ಟವಾಗಿದೆ.

**ಪಿಎಫ್ಐ ನಿಷೇಧ**

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಉಗ್ರಗಾಮಿ ನಿಲುವುಗಳನ್ನು ಹೊಂದಿರುವ ಮತ್ತು ತನ್ನ ಕಲ್ಪಿತ ವಿರೋಧಿಗಳ ವಿರುದ್ಧ ಹಿಂಸಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸಂಘಟನೆಯಾಗಿದೆ. ಈ ಉಗ್ರಗಾಮಿ ನಿಲುವುಗಳ ವಿರುದ್ಧ ಪಕ್ಷವು ಯಾವಾಗಲೂ ಪ್ರಬಲವಾಗಿ ವಿರೋಧಿಸಿದೆ ಮತ್ತು ಪಿಎಫ್ಐ ನ ಹಿಂಸಾತ್ಮಕ ಚಟುವಟಿಕೆಗಳನ್ನು ಯಾವಾಗಲೂ ಖಂಡಿಸಿದೆ.

ಆದರೆ, ಈ ಸಮಸ್ಯೆಯನ್ನು ಬಗೆಹರಿಸಲು ಯುಎಪಿಎ (ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ) ಅಡಿಯಲ್ಲಿ ಪಿಎಫ್ಐಯನ್ನು ಒಂದು ಕಾನೂನುಬಾಹಿರ ಸಂಘಟನೆಯೆಂದು ಘೋಷಣೆ ಮಾಡುವುದು ಸರಿಯಾದ ಮಾರ್ಗವಲ್ಲ. ಆರ್.ಎಸ್.ಎಸ್. ಮತ್ತು ಮಾವೋಯಿಸ್ಟ್ ನಂತಹ ಸಂಘಟನೆಗಳನ್ನು ನಿಷೇಧ ಮಾಡಿದ್ದು ಹೆಚ್ಚು ಪರಿಣಾಮ ಬೀರಲಿಲ್ಲ ಎನ್ನುವುದನ್ನು ಹಿಂದಿನ ಅನುಭವ ತೋರಿಸಿದೆ. ಕಾನೂನುಬಾಹಿರ ಅಥವಾ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿಕೊಂಡಾಗ ಈಗಿರುವ ಕಾನೂನಿನಡಿಯಲ್ಲೇ ಪಿಎಫ್ಐ ವಿರುದ್ಧ ದೃಢವಾದ ಆಡಳಿತಾತ್ಮಕ ಕ್ರಮವನ್ನು ತೆಗೆದುಕೊಳ್ಳಬೇಕಿತ್ತು. ಅದರ ಪಂಥವಾದಿ ಹಾಗೂ ವಿಚ್ಛಿದ್ರಕಾರಿ ಸಿದ್ಧಾಂತಗಳನ್ನು ಬಯಲು ಮಾಡಬೇಕು ಮತ್ತು ಜನರ ನಡುವೆ ಅದರ ವಿರುದ್ಧ ರಾಜಕೀಯವಾಗಿ ಹೋರಾಡಬೇಕು.

ಕೇರಳ ಹಾಗೂ ಕರಾವಳಿ ಕರ್ನಾಟಕದಲ್ಲಿ ಪಿಎಫ್ಐ ಮತ್ತು ಆರ್.ಎಸ್.ಎಸ್. ಹತ್ಯೆಗಳಲ್ಲಿ ತೊಡಗಿಕೊಂಡಿವೆ ಮತ್ತು ಪ್ರತೀಕಾರದ ಕೊಲೆಗಳನ್ನು ಮಾಡುತ್ತಿವೆ; ಆ ಮೂಲಕ ಕೋಮು ಧೃವೀಕರಣ ಸೃಷ್ಟಿಸುವ ಉದ್ದೇಶದಿಂದ ವಾತಾವರಣವನ್ನು ಕಲುಷಿತಗೊಳಿಸುತ್ತಿವೆ. ಸನಾತನ ಸಂಸ್ಥೆ ಮತ್ತು ಹಿಂದೂ ಜನಜಾಗೃತಿ ಸಮಿತಿಯಂತಹ ಉಗ್ರಗಾಮಿ ಸಂಘಟನೆಗಳೂ ಇವೆ, ಅವುಗಳ ಸದಸ್ಯರುಗಳು ಪ್ರಸಿದ್ಧ ಜಾತ್ಯತೀತ ಬರಹಗಾರರು ಹಾಗೂ ವ್ಯಕ್ತಿಗಳ ಕೊಲೆಗಳಲ್ಲಿ ತಳಕುಹಾಕಿಕೊಂಡಿದ್ದಾರೆ.

ಈ ಎಲ್ಲಾ ಶಕ್ತಿಗಳನ್ನು, ಉಗ್ರಗಾಮಿ ಬಹುಸಂಖ್ಯಾತ ಗುಂಪುಗಳನ್ನು ಅಥವಾ ಅಲ್ಪಸಂಖ್ಯಾತ ಗುಂಪುಗಳನ್ನು ಪ್ರತಿನಿಧಿಸಿರಲಿ, ನಾಡಿನ ಕ್ರಮಬದ್ಧ ಕಾನೂನುಗಳನ್ನು ಬಳಸುವ ಮೂಲಕ ಮತ್ತು ದೃಢವಾದ ಆಡಳಿತಾತ್ಮಕ ಕ್ರಮಗಳ ಮೂಲಕ ಎದುರಿಸಬೇಕು.

**ಜಮ್ಮು ಮತ್ತು ಕಾಶ್ಮೀರ**

ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿ ಹದಗೆಡುತ್ತಲೇ ಇದೆ. ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ತೀರ ಸರ್ವಾಧಿಕಾರಿ ಮತ್ತು ಕೋಮುವಾದಿ ನೀತಿಗಳು ಈ ಪ್ರದೇಶದ ಬಹು ದೊಡ್ಡ ಜನವಿಭಾಗದ ನಡುವೆ ಆಳವಾದ ಹಾಗೂ ಭಾರಿ ಅತೃಪ್ತಿಗೆ ಕಾರಣವಾಗಿವೆ. ಕರಾಳ ಕಾನೂನುಗಳ ಏಕಪಕ್ಷೀಯ ದುರ್ಬಳಕೆ, ಅಭಿವ್ಯಕ್ತಿ ಸ್ವಾತಂತ್ರ್ಯದ ನಿರಾಕರಣೆ, ಮಾಧ್ಯಮಗಳನ್ನು ಹತ್ತಿಕ್ಕುವುದು, ಶಾಂತಿಯುತ ಪ್ರತಿಭಟನೆಗಳಿಗೆ ಅವಕಾಶ ನೀಡದಿರುವುದು ಮತ್ತು ಯುವಜನರನ್ನು ಮನಸೋ ಇಚ್ಛೆ ಬಂಧಿಸುವುದು ಮುಂತಾದವುಗಳಿಂದಾಗಿ ಕಾಶ್ಮೀರವನ್ನು ಹೆಚ್ಚೂ ಕಮ್ಮಿ ದಿಗ್ಬಂಧನದಲ್ಲಿಟ್ಟಂತಿದೆ.

ಕೇಂದ್ರಾಡಳಿತ ಪ್ರದೇಶದ ಆಡಳಿತವು ಈ ಭಾಗದ ಸಮಾಜ ವ್ಯವಸ್ಥೆಯಲ್ಲಿ ಭಾರಿ ಬದಲಾವಣೆಗಳನ್ನು ತಂದಿದೆ. ಪುನರ್ಸಂಘಟನಾ ಕಾಯಿದೆಯ ಮೂಲಕ ರಾಜ್ಯ ಪಟ್ಟಿಯಲ್ಲಿನ ದೃಢೀಕರಣ ಪತ್ರಗಳನ್ನು ವಾಸಸ್ಥಾನದ ದೃಢೀಕರಣ ಪತ್ರಗಳನ್ನಾಗಿ ಬದಲಾಯಿಸುವ ಮೂಲಕ ಹೊರಗಿನವರಿಗೆ ಆಸ್ತಿ ಹಾಗೂ ಮತದಾನದ ಹಕ್ಕನ್ನು ನೀಡಲಾಗಿದೆ, ಭೂಕಾನೂನುಗಳನ್ನು ಬದಲಾಯಿಸಲಾಗಿದೆ.

ಸೀಮಾ ನಿರ್ಣಯ ಆಯೋಗ (ಗಡಿ ಗುರುತಿಸುವ ಆಯೋಗ – ಡಿಲಿಮಿಟೇಷನ್ ಕಮಿಷನ್) ದ ತಪ್ಪು ನಿರ್ಧಾರಗಳಿಂದಾಗಿ ಮತ್ತು ಯಾವುದೇ ಸಮರ್ಥನೆಯಿಲ್ಲದೇ ಜಮ್ಮು ಮತ್ತು ಕಾಶ್ಮೀರ ಕಣಿವೆಯ ಜನಸಂಖ್ಯಾ ಮಾನದಂಡಗಳನ್ನು ಸರಿಯಾಗಿ ಅನುಸರಿಸದೇ ಕಣಿವೆ ಮತ್ತು ಜಮ್ಮುವಿನ ಮುಸ್ಲಿಂ ಬಹುಸಂಖ್ಯಾತ ಪ್ರದೇಶಗಳಲ್ಲಿನ ಮಹತ್ವವನ್ನು ಕಡಿಮೆ ಮಾಡಲಾಗಿದೆ. ಸರ್ಕಾರ ರಚನೆಯಾಗುವಾಗ ಬಿಜೆಪಿಗೆ ಅನುಕೂಲವಾಗುವಂತೆ ಮತದಾರರ ಪಟ್ಟಿ ಪರಿಷ್ಕರಣೆಯ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಳ್ಳುವ ಪ್ರಯತ್ನಗಳು ಮುಂದುವರಿದಿವೆ.

ಹೂಡಿಕೆ ಹಾಗೂ ಅಭಿವೃದ್ಧಿ ಮತ್ತು ಉದ್ಯೋಗಾವಕಾಶಗಳನ್ನು ತೆರೆಯುವ ವಿಷಯಗಳ ಕುರಿತ ಸರ್ಕಾರದ ಉತ್ಪ್ರೇಕ್ಷಿತ ಹೇಳಿಕೆಗಳು ತಲೆಬುಡವಿಲ್ಲದವು.  ಬಹುಪಾಲು ಜನರ ಜೀವನೋಪಾಯವಾಗಿರುವ ತೋಟಗಾರಿಕೆಯಂತಹ ವಲಯಗಳಲ್ಲಿ ಕೂಡ ಬೆಲೆ ಕುಸಿತ, ಮೂಲ ಸೌಕರ್ಯಗಳ ಅಡ್ಡಿ ಆತಂಕಗಳು, ಒಳಸುರಿಗಳ ವೆಚ್ಚದಲ್ಲಿನ ಏರಿಕೆ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಣ್ಣು ಕೊಂಡೊಯ್ಯುವ ವಾಹನಗಳಿಗೆ ಸುಲಲಿತ ಸಾಗಣೆಯಲ್ಲಿನ ಕೊರತೆ ಮುಂತಾದವುಗಳಿಂದಾಗಿ ಬಿಕ್ಕಟ್ಟು ಆಳವಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಜನರು ಹಿಂದೆಂದಿಗಿಂತಲೂ ಹೆಚ್ಚು ನಿರಾಸಕ್ತರಾಗುತ್ತಿದ್ದಾರೆ. ಜನರ ಬಲವಂತದ ಮೌನದಿಂದಾಗಿ ಆಡಳಿತಾಂಗವು ತೃಪ್ತಿಪಟ್ಟುಕೊಂಡಂತೆ ಕಾಣುತ್ತಿದ್ದರೂ, ಆದರೆ ಅದು ದೀರ್ಘಕಾಲೀನವಾಗಿ ಪರಿಸ್ಥಿತಿಯ ದುರುಪಯೋಗಪಡಿಸಿಕೊಳ್ಳುವ ಶಕ್ತಿಗಳಿಗೆ ಅನುಕೂಲವಾಗುತ್ತದೆ ಮತ್ತು ಅವರು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುತ್ತಾರೆ ಹಾಗೂ ಅದು ಉಗ್ರವಾದಕ್ಕೆ ಕುಮ್ಮಕ್ಕು ನೀಡುತ್ತದೆಯಷ್ಟೆ. ಈಗಾಗಲೇ ಆ ಪ್ರದೇಶದಲ್ಲಿ ಕಾಶ್ಮೀರಿ ಪಂಡಿತರು ಹಾಗೂ ಕೆಲಸಗಾರರನ್ನು ಗುರಿಯಾಗಿಸಿದ ವಿಷಾದಕರ ಹತ್ಯೆಗಳು ಹೆಚ್ಚಾಗುತ್ತಿವೆ.

ಕಾಶ್ಮೀರವನ್ನು ಕೋಮುವಾದಿ ಹಾಗೂ ಸರ್ವಾಧಿಕಾರಿ ಬಿಜೆಪಿಯ ಆಡಳಿತದ ಅಧೀನದಲ್ಲಿ ಬಿಡಲು ಸಾಧ್ಯವಿಲ್ಲ. ಜಾತ್ಯತೀತ ಪ್ರಜಾಸತ್ತಾತ್ಮಕ ಶಕ್ತಿಗಳು ಜನರ ಹಕ್ಕುಗಳ ರಕ್ಷಣೆಗೆ ಮುಂದಾಗಲೇಬೇಕು.

**ಜಾತ್ಯತೀತ ವಿರೋಧ ಪಕ್ಷಗಳು: ಇತ್ತೀಚಿನ ಬೆಳವಣಿಗೆಗಳು**

**ಬಿಹಾರ್:** ಜುಲೈ ತಿಂಗಳ ನಮ್ಮ ಕೇಂದ್ರ ಸಮಿತಿಯ ಸಭೆ ಮುಗಿಯುತ್ತಿದ್ದಂತೆಯೇ, ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಪಕ್ಷವು ಬಿಜೆಪಿಯೊಂದಿಗಿನ ತನ್ನ ಮೈತ್ರಿಕೂಟವನ್ನು ತೊರೆದು ***ಮಹಾಘಟಬಂಧನ್*** ಜತೆ ಮತ್ತೆ ಸೇರಿಕೊಳ್ಳುವ ತೀರ್ಮಾನ ಮಾಡಿತು. ಮುಖ್ಯ ಮಂತ್ರಿ ಪದವಿಯಿಂದ ರಾಜೀನಾಮೆ ನೀಡಿದ ನಂತರ ಆರ್‌ಜ ಡಿ ಹಾಗೂ ಕಾಂಗ್ರೆಸ್ಸಿನೊಂದಿಗೆ ಸರ್ಕಾರ ರಚಿಸಲು ಅವರು ತಮ್ಮ ಹಕ್ಕನ್ನು ಮಂಡಿಸಿದರು. ನಿತೀಶ್ ಕುಮಾರ್ ಮುಖ್ಯಮಂತ್ರಿಯಾಗಿ ಮತ್ತು ತೇಜಸ್ವಿ ಯಾದವ್ ಉಪ ಮುಖ್ಯಮಂತ್ರಿಯಾಗಿ ಹಾಗೂ ಕಾಂಗ್ರೆಸ್ಸಿನವರು ಇಬ್ಬರು ಸಚಿವರಾಗಿ ಸರ್ಕಾರ ರಚನೆಯಾಯಿತು. ವಿಧಾನಸಭೆಯಲ್ಲಿ ಅದು ತನ್ನ ಬಹುಮತವನ್ನು ಸಾಬೀತುಪಡಿಸಿತು. ***ಮಹಾಘಟಬಂಧನ್*** ಜತೆಯ ಒಡಂಬಡಿಕೆಯೊಂದಿಗೆ ವಿಧಾನ ಸಭಾ ಚುನಾವಣೆಯನ್ನು ಎದುರಿಸಿದ್ದ ಎಡ ಪಕ್ಷಗಳು ಈ ಸರ್ಕಾರಕ್ಕೆ ಬೆಂಬಲ ನೀಡಿದವು.

ಮಹಾರಾಷ್ಟ್ರದಲ್ಲಿ ಉದ್ಧವ್ ಠಾಕರೆ ನೇತೃತ್ವದ ಮಹಾ ವಿಕಾಸ್ ಅಘಾಡಿ (ಎಂವಿಎ) ಸರ್ಕಾರವನ್ನು ಬಿಜೆಪಿಯು ತನ್ನ ಕುದುರೆ ವ್ಯಾಪಾರದಿಂದ ಅಸ್ಥಿರಗೊಳಿಸಿ ಏಕನಾಥ್ ಶಿಂಧೆಯ ಪರ್ಯಾಯ ಸರ್ಕಾರವನ್ನು ಬಿಜೆಪಿಯ ಫಡ್ನವೀಸ್ ಉಪ ಮುಖ್ಯಮಂತ್ರಿಯಾಗುವುದರೊಂದಿಗೆ ರಚಿಸಿದ ಬೆನ್ನಲ್ಲೇ, ಬಿಹಾರದಲ್ಲಿನ ಈ ಬೆಳವಣಿಗೆಯು ಹಿಂದುತ್ವ ಕೋಮುವಾದಿ ಆಕ್ರಮಣದ ವಿರುದ್ಧದ ಜಾತ್ಯತೀತ ಶಕ್ತಿಗಳಿಗೆ ಉತ್ತೇಜನ ನೀಡಿತು.

**ತೆಲಂಗಾಣ:** ಹಿಂದಿನ ತನ್ನೆಲ್ಲಾ ಡೋಲಾಯಮಾನ ಸ್ಥಿತಿಯನ್ನು ತೊರೆದು, ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಯು ಬಿಜೆಪಿಯ ವಿರುದ್ಧ ಬಹಳ ಪ್ರಬಲವಾಗಿ ಹೊರಬಂತು. ಟಿಆರ್‌ಎಸ್ ಮುಖ್ಯ ಮಂತ್ರಿಯವರು ಬಿಜೆಪಿಯ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಕೆಲವು ಜಾತ್ಯತೀತ ಪಕ್ಷಗಳನ್ನು ಅಣಿನೆರೆಸುವಲ್ಲಿ ಆರಂಭಿಕ ಹೆಜ್ಜೆಗಳನ್ನು ಇರಿಸಿದ್ದಾರೆ. ಇತರ ಪಕ್ಷಗಳಿಂದ ಪಕ್ಷಾಂತರಕ್ಕೆ ಕುಮ್ಮಕ್ಕು ನೀಡುವ ಬಿಜೆಪಿಯ ಆಕ್ರಮಣಕಾರಿ ಹಾಗೂ ಲಜ್ಜೆಗೆಟ್ಟ ಪ್ರಯತ್ನಗಳು ಕೂಡ ಟಿಆರ್‌ಎಸ್‌ನ ಈ ಬದಲಾದ ನಿಲುವಿಗೆ ಕಾರಣವಾಯಿತು. ರಾಷ್ಟ್ರಮಟ್ಟದಲ್ಲಿ ಪಾತ್ರ ವಹಿಸಲು ಮುಖ್ಯ ಮಂತ್ರಿಯವರು ಭಾರತ್ ರಾಷ್ಟ್ರ ಸಮಿತಿ (ಬಿಆರ್‌ಎಸ್) ಎನ್ನುವ ರಾಷ್ಟ್ರೀಯ ಪಕ್ಷವೊಂದನ್ನು ಪ್ರಾರಂಭಿಸಿದರು.

ಕಾಂಗ್ರೆಸ್ ಶಾಸಕರಾಗಿದ್ದವರೊಬ್ಬರು ಬಿಜೆಪಿಗೆ ಪಕ್ಷಾಂತರ ಮಾಡಿದ್ದರಿಂದಾಗಿ ಮುನುಗೋಡು ವಿಧಾನ ಸಭಾ ಉಪ ಚುನಾವಣೆಯ ಅಗತ್ಯವುಂಟಾಯಿತು. ನವಂಬರ್ ಉಪಚುನಾವಣೆ ನಡೆಯಲಿದೆ. ಪ್ರಧಾನ ಸ್ಪರ್ಧೆ ಟಿಆರ್‌ಎಸ್ ಹಾಗೂ ಬಿಜೆಪಿ ನಡುವೆ ನಡೆಯಲಿದೆ. ಬಿಜೆಪಿಯನ್ನು ಸೋಲಿಸಲು ಟಿಆರ್‌ಎಸ್ ತಮ್ಮ ಅಭ್ಯರ್ಥಿಗೆ ನಮ್ಮ ಪಕ್ಷದ ಹಾಗೂ ಸಿಪಿಐನ ಬೆಂಬಲ ಕೇಳಿತು. ಮುಂದಿನ ಹೊಂದಾಣಿಕೆ ವಿಷಯವನ್ನು ನಂತರದಲ್ಲಿ ಪರಿಗಣಿಸಲು ನಿರ್ಧರಿಸಿ, ಈಗಿನ ಉಪ ಚುನಾವಣೆಯಲ್ಲಿ ಟಿಆರ್‌ಎಸ್ ಅಭ್ಯರ್ಥಿಗೆ ಬೆಂಬಲ ನೀಡಲು ನಮ್ಮ ರಾಜ್ಯ ಸಮಿತಿಯು ತೀರ್ಮಾನಿಸಿದೆ.

**ಜಾತ್ಯತೀತ ವಿರೋಧ ಪಕ್ಷಗಳ ಐಕ್ಯತೆ ಸಾಧಿಸಲು ಪ್ರಯತ್ನಗಳು:** ಈ ಬೆಳವಣಿಗೆಗಳನ್ನು ಅನುಸರಿಸಿ, ಜಾತ್ಯತೀತ ವಿರೋಧ ಪಕ್ಷಗಳ ನಡುವೆ ವಿಚಾರ ವಿನಿಮಯಗಳು ತೀವ್ರಗೊಂಡಿವೆ. ನಿತೀಶ್ ಕುಮಾರ್ ದೆಹಲಿಗೆ ಬಂದು ಬಿಜೆಪಿಯನ್ನು ಸೋಲಿಸಲು ಐಕ್ಯತೆಯ ಪ್ರಸ್ತಾಪಗಳೊಂದಿಗೆ ಪ್ರಮುಖ ವಿರೋಧ ಪಕ್ಷಗಳನ್ನು ಭೇಟಿ ಮಾಡಿದ್ದಾರೆ. ಅದೇ ರೀತಿಯಲ್ಲಿ, ಶರದ್ ಪವಾರ್ ಅವರು ದೆಹಲಿಯ ರಾಷ್ಟ್ರೀಯ ಸಮಾವೇಶದಲ್ಲಿ ಎನ್‌ಸಿಪಿಯ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ ಮತ್ತು ಜಾತ್ಯತೀತ ವಿರೋಧ ಪಕ್ಷಗಳ ಐಕ್ಯತೆಯ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ. ದೇವಿ ಲಾಲ್ ಅವರ ಜನ್ಮ ದಿನಾರಣೆ ಅಂಗವಾಗಿ ಹರ್ಯಾಣಾದ ಫತೇಹಾಬಾದ್‌ನಲ್ಲಿ ಐಎನ್‌ಎಲ್‌ಡಿಯ ಓಂ ಪ್ರಕಾಶ್ ಚೌತಾಲಾ ಅವರು ಬೃಹತ್ ಬಹಿರಂಗ ಸಭೆಯೊಂದನ್ನು ಸಂಘಟಿಸದಿದ್ದರು. ಆ ಸಭೆಗೆ ಹಲವಾರು ರಾಷ್ಟ್ರೀಯ ನಾಯಕರುಗಳನ್ನು ಆಹ್ವಾನಿಸಲಾಗಿತ್ತು ಮತ್ತು ಭಾಗವಹಿಸಿದ್ದರು ಕೂಡ.

**ಕಾಂಗ್ರೆಸ್:** ಕಾಂಗ್ರೆಸ್ ಪಕ್ಷವು ರಾಹುಲ್ ಗಾಂಧಿಯ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 150 ದಿನಗಳ ಭಾರತ್ ಜೋಡೋ ಯಾತ್ರೆಯನ್ನು ಪ್ರಾರಂಭಿಸಿದೆ. ಇದಕ್ಕೆ ಮುಖ್ಯವಾಗಿ ದಕ್ಷಿಣ ರಾಜ್ಯಗಳಲ್ಲಿ ಪ್ರತಿಸ್ಪಂದನೆ ಸಿಕ್ಕಿದೆ. ಅದು ಬಿಜೆಪಿಯ ಪ್ರಬಲ ರಾಜ್ಯಗಳಿಗೆ ಪ್ರವೇಶಮಾಡಿದಾಗ ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂದು ಕಾದು ನೋಡಬೇಕಿದೆ. ಕಾಂಗ್ರೆಸ್ ಪಕ್ಷದೊಳಗಿನ ಇತ್ತೀಚಿನ ಅವ್ಯವಸ್ಥೆಯ ಬೆಳವಣಿಗೆಗಳನ್ನು ನೋಡಿದಾಗ ಮತ್ತು ಕೆಲವು ರಾಜ್ಯಗಳಲ್ಲಿ ಅದರ ಹಲವಾರು ಮುಖಂಡರುಗಳು ಬಿಜೆಪಿಗೆ ಪಕ್ಷಾಂತರ ಮಾಡಿರುವ ಹಿನ್ನೆಲೆಯಲ್ಲಿ ಪಕ್ಷವನ್ನು ಒಂದುಗೂಡಿಸುವ ಹಾಗೂ ಜನರೊಂದಿಗಿನ ಜೀವಂತ ಕೊಂಡಿಯನ್ನು ಬೆಸೆಯುವ ಮೂಲಕ ಪಕ್ಷದ ಸ್ಥಾನವನ್ನು ಉಳಿಸಿಕೊಳ್ಳುವ ಯತ್ನದಲ್ಲಿ ಈ ಯಾತ್ರೆಯು ಇದ್ದಂತೆ ಕಾಣುತ್ತಿದೆ.

ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ್ ಖರ್ಗೆಯವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಕಳೆದ 24 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಗಾಂಧಿಯಲ್ಲದವರೊಬ್ಬರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದಾರೆ.

**ಸಿಪಿಐ:** ಆಂಧ್ರ ಪ್ರದೇಶದ ವಿಜಯವಾಡಾದಲ್ಲಿ ಸಿಪಿಐನ 24 ನೇ ಮಹಾಧಿವೇಶನವು 2022 ರ ಅಕ್ಟೋಬರ್ 14 ರಿಂದ 18 ರವರೆಗೆ ನಡೆದಿದೆ. ಸಿಪಿಐ(ಎಂ) ಮತ್ತು ಸಿಪಿಐ–ಎಂಎಲ್ ನ ಪ್ರಧಾನ ಕಾರ್ಯದರ್ಶಿಗಳು ಮಹಾಧಿವೇಶನಕ್ಕೆ ಶುಭ ಕೋರಿದರು ಮತ್ತು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

**ಕೇರಳ ಎಲ್.ಡಿ.ಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳು**

ಎಲ್.ಡಿ.ಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಆಳುವ ಬಿಜೆಪಿಯ ರಾಜಕೀಯ ಉದ್ದೇಶದ ಭಾಗವಾಗಿ ಕೇರಳದ ರಾಜ್ಯಪಾಲರು ಒಕ್ಕೂಟವಾದದ ಮೇಲೆ ಲಜ್ಜೆಗೆಟ್ಟ ದಾಳಿ ನಡೆಸುತ್ತಿದ್ದಾರೆ. ಕೇರಳ ಶೈಕ್ಷಣಿಕ ವ್ಯವಸ್ಥೆಯ ಮೇಲಿನ ಅವರ ಹಾರಿಕೆಯ ಮಾತುಗಳು ಆ ನಿಟ್ಟಿನಲ್ಲಿ ಇತ್ತೀಚಿನದು. ಕೇರಳ ವಿಧಾನ ಸಭೆಯು ಅಂಗೀಕರಿಸಿದ ವಿಶ್ವವಿದ್ಯಾಲಯಗಳ ಕಾಯಿದೆಯ ಅನುಸಾರ ಕೇರಳ ವಿಶ್ವವಿದ್ಯಾಲಯಗಳ ಕುಲಪತಿಯ ಸ್ಥಾನ ಅಲಂಕರಿಸುವ ಅಧಿಕಾರ ಇಲ್ಲದಿದ್ದಾಗ್ಯೂ ಕೇರಳದ ಹಲವಾರು ವಿಶ್ವವಿದ್ಯಾಲಯಗಳ ಉಪಕುಲಪತಿಗಳ ರಾಜೀನಾಮೆಗೆ ಒತ್ತಾಯಿಸುವ ರೀತಿಯು ಅಂತಹ ಒಂದು ಪ್ರಯತ್ನವಾಗಿದೆ. ಅವರ ಆದೇಶಕ್ಕೆ ಕೇರಳ ಹೈಕೋರ್ಟ್ ತಡೆ ನೀಡಿದೆ ಮತ್ತು ಉಪಕುಲಪತಿಗಳಿಂದ ವಿವರಣೆಯನ್ನು ಕೇಳಿದೆ. ಈ ವಿಷಯ ನ್ಯಾಯಾಂಗದ ಪರಿಶೀಲನೆಯಲ್ಲಿರುವಾಗ್ಯೂ, ಅವರ ಈ ಪ್ರಯತ್ನವು ಕೇರಳದ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಫ್ಯಾಸಿಸ್ಟಿಕ್ ಆರ್.ಎಸ್.ಎಸ್. ನ ಹಿಂದುತ್ವ ಸೈದ್ಧಾಂತಿಕ ಕಾರ್ಯಸೂಚಿಯನ್ನು ತುರುಕುವ ರಾಜಕೀಯ ಉದ್ದೇಶದ ಭಾಗವಾಗಿದೆ.

ಆ ನಂತರದಲ್ಲಿ, ರಾಜ್ಯಪಾಲರು ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಹಣಕಾಸು ಸಚಿವರ ರಾಜೀನಾಮೆಗೆ ಒತ್ತಾಯಿಸಿದ್ದಾರೆ. ಅವರಿಗೆ ಆ ಹಕ್ಕಾಗಲೀ ಅಥವಾ ಸಂವಿಧಾನದಡಿಯಲ್ಲಿ ಅಧಿಕಾರವಾಗಲೀ ಇಲ್ಲ. ಮುಖ್ಯಮಂತ್ರಿಯವರು ಅದಕ್ಕೆ ಉತ್ತರಿಸಿ ತನ್ನ ಸಂಪುಟದಲ್ಲಿ ಇರಬೇಕಾದವರನ್ನು ಆಯ್ಕೆ ಮಾಡುವ ಹಕ್ಕು ಮುಖ್ಯಮಂತ್ರಿಗಳಿಗಲ್ಲದೇ ಬೇರಾರಿಗೂ ಇಲ್ಲ ಎಂದು ತಿಳಿಸಿದ್ದಾರೆ.

ಭಾರತೀ ಸಂವಿಧಾನದ ಮೂಲಭೂತ ಲಕ್ಷಣಗಳನ್ನು ಮತ್ತು ಜಾತ್ಯತೀತ ಪ್ರಜಾಸತ್ತಾತ್ಮಕ ತಳಹದಿಯನ್ನು ಮಾನ್ಯ ಮಾಡುವ ಹಾಗೂ ಗೌರವಿಸುವ ಎಲ್ಲರೂ ಸಾಂವಿಧಾನಿಕ ಹಕ್ಕುಗಳ ರಕ್ಷಣೆಗೆ ಒಗ್ಗೂಡಬೇಕಾಗುತ್ತದೆ. ವಿಷಾದದ ಸಂಗತಿಯೆಂದರೆ, ಯುಡಿಎಫ್ ನ ಐಯುಎಂಎಲ್ ಮತ್ತು ಆರ್.ಎಸ್.ಪಿ ಪಕ್ಷಗಳು ರಾಜ್ಯಪಾಲರ ಕ್ರಮಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿರುವಾಗ, ಕಾಂಗ್ರೆಸ್ ಪಕ್ಷದ ನಿಲುವು ಸಂದೇಹಕ್ಕೆಡೆಮಾಡಿದೆ.

ರಾಜ್ಯಪಾಲರ ಇಂತಹ ಲಜ್ಜೆಗೆಟ್ಟ ಸಹಭಾಗಿತ್ವವನ್ನು ಕೇರಳದ ಜನರು ಒಗ್ಗೂಡಿ ಪ್ರತಿರೋಧಿಸುತ್ತಾರೆ ಮತ್ತು ಎಲ್.ಡಿ.ಎಫ್ ಸರ್ಕಾರವನ್ನು ಅಸ್ಥಿರಗೊಳಿಸುವ ಎಲ್ಲಾ ಯತ್ನಗಳನ್ನು ಸೋಲಿಸುತ್ತಾರೆ.

**ಪಶ್ಚಿಮ ಬಂಗಾಳ**

ಪಶ್ಚಿಮ ಬಂಗಾಳದಲ್ಲಿ ಭಾರಿ ಭ್ರಷ್ಟಾಚಾರ ಹಗರಣಗಳು ಬಯಲಾಗಿರುವುದು ಮತ್ತು ಸಚಿವರುಗಳ, ಬಹಳ ಮುಖ್ಯವಾಗಿ ಟಿಎಂಸಿಯ ಪ್ರಬಲ ಮುಖಂಡ ಪಾರ್ಥಾ ಚಟರ್ಜಿಯ ಬಂಧನಗಳ ಕುರಿತು ಜುಲೈನಲ್ಲಿ ನಡೆದ ಕೇಂದ್ರ ಸಮಿತಿ ಸಭೆಯು ಪ್ರಸ್ತಾಪಿಸಿದೆ. ಟಿಎಂಸಿ ಸಕಾರವು ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ ಸಂಪೂರ್ಣ ಭ್ರಷ್ಟ ಎಂಬ ನಮ್ಮ ನಿಲುವನ್ನು ಈ ಬೆಳವಣಿಗೆಗಳು ಸಾಬೀತುಮಾಡಿವೆ. ಟಿಎಂಸಿ ಸರ್ಕಾರದಿಂದ ಪೋಷಿತವಾದ ನೀತಿಗೆಟ್ಟ ದುರಾಡಳಿತ ಮತ್ತು ಅಪರಾಧ–ಭ್ರಷ್ಟತನದ ನಂಟು ಈಗ ನಮ್ಮ ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳಿಂದ ವ್ಯಾಪಕ ಪ್ರತಿಭಟನೆಗಳನ್ನು ಎದುರಿಸುತ್ತಿದೆ. ಈ ಭಾರಿ ಪ್ರತಿಭಟನೆಗಳು ತೀವ್ರತರದ ದಮನಕ್ಕೆ ಒಳಗಾಗಿವೆ. ಸಂಗಾತಿಗಳು ಈ ದಾಳಿಗಳನ್ನು ಧೈರ್ಯವಾಗಿ ಎದುರಿಸುತ್ತಿದ್ದಾರೆ ಮತ್ತು ಟಿಎಂಸಿ ಸರ್ಕಾರದ ಹಾಗೂ ಮುಖ್ಯಮಂತ್ರಿಯ ದುರಾಡಳಿತದ ವಿರುದ್ಧದ ಹೋರಾಟಗಳು ತೀವ್ರಗೊಳ್ಳುತ್ತಿವೆ.

ಹಣಪಿಶಾಚಿಯಂತಹ ಭ್ರಷ್ಟಾಚಾರ ಮತ್ತು ವ್ಯಾಪಕ ಹಗರಣಗಳು ಬಯಲಾದ ನಂತರ ಸಾರ್ವಜನಿಕರಲ್ಲಿ ಎಬ್ಬಿಸುತ್ತಿರುವ ಆಕ್ರೋಶ ಹಾಗೂ ಪ್ರತಿರೋಧಗಳಿಂದಾಗಿ ಮಮತಾ ಬ್ಯಾನರ್ಜಿ ಹಾಗೂ ಟಿಎಂಸಿ ಸರ್ಕಾರವು ಸಿಲುಕಿರುವ ಗಂಭೀರ ದುಃಸ್ಥಿತಿಯ ಕಾರಣ ಮಮತಾ ಬ್ಯಾನರ್ಜಿಯವರಿಗೆ ಆರ್.ಎಸ್.ಎಸ್ ಮತ್ತು ಮೋದಿಯವರ ಬಗ್ಗೆ ಮನಃಪೂರ್ವಕವಾದ ಮೃದುಧೋರಣೆ ಉಕ್ಕಿಬಂದಿದೆ. ಒಂದು ಪತ್ರಿಕಾ ಗೋಷ್ಠಿಯಲ್ಲಿ "ಆರ್.ಎಸ್.ಎಸ್ ಅಷ್ಟೇನೂ ಕೆಟ್ಟದ್ದಲ್ಲ" ಎಂದು ಹೇಳಿದ ನಂತರ ಮಮತ ಬ್ಯಾನರ್ಜಿ ಮತ್ತೊಂದು ಸಾರ್ವಜನಿಕ ಹೇಳಿಕೆಯೊಂದರಲ್ಲಿ ಇಡಿ ಹಾಗೂ ಸಿಬಿಐ ಯಂತಹ ಕೇಂದ್ರ ಸಂಸ್ಥೆಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದರ ಹಿಂದೆ ಮೋದಿಯವರು ಇಲ್ಲ ಎನ್ನುವ ಮೂಲಕ ಅವರನ್ನು ನಿರ್ದೋಷಿಯನ್ನಾಗಿ ಮಾಡಿದ್ದಾರೆ. ಟಿಎಂಸಿಯ ಈ ಹಠಾತ್ತಾದ ತಿರುಗುಮುರುಗು ಧೋರಣೆಯು ಉಪ ರಾಷ್ಟ್ರಪತಿ ಚುನಾವಣೆಯ ಸಮಯದಲ್ಲಿ ಕಣ್ಣಿಗೆ ರಾಚುವಂತೆ ದೇಶದ ಜನರ ಮುಂದೆ ಬಯಲಾಯಿತು: ವಿರೋಧಿಪಕ್ಷಗಳ ಸಂಯುಕ್ತ ಅಭ್ಯರ್ಥಿಗೆ ಬೆಂಬಲ

ನೀಡುವುದಾಗಿ ಈ ಹಿಂದೆ ವಿರೋಧಪಕ್ಷದ ರಾಜಕೀಯ ಮುಖಂಡರುಗಳಿಗೆ ಆಶ್ವಾಸನೆ ನೀಡಿದ್ದ ಟಿಎಂಸಿ ಹಿಂದೆ ಸರಿದು ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ಭಾಗವಹಿಸದೆ ವಚನ ಭಂಗ ಮಾಡಿತು.

ಮಮತಾ ಬ್ಯಾನರ್ಜಿಯವರು ವಾಜಪೇಯಿ ಸರ್ಕಾರದಲ್ಲಿ ಸಂಪುಟ ಸಚಿವರಾಗಿದ್ದಾಗಲೇ ಆರ್.ಎಸ್.ಎಸ್./ಬಿಜೆಪಿಯೊಂದಿಗೆ ಸಖ್ಯ ಬೆಳೆಸಿದ ಚರಿತ್ರೆ ಇದೆ. ಪಶ್ಚಿಮಬಂಗಾಳದಲ್ಲಿ ಕಮ್ಯುನಿಸ್ಟ್ ವಿರೋಧಿ ಶಕ್ತಿಯಾಗಿ ಟಿಎಂಸಿ ಬೆಳೆಯುವಾಗ ಅದು ಬಿಜೆಪಿಯೊಂದಿಗೆ ಮೈತ್ರಿ ಹೊಂದಿತ್ತು. ಟಿಎಂಸಿಯನ್ನು ಒಂದು ಫ್ಯಾಸಿಸ್ಟ್ ವಿರೋಧಿ ಹೋರಾಟಕ್ಕೆ ಬದ್ಧವಾಗಿರುವ ಶಕ್ತಿ ಎಂದು ಕಂಡಿದ್ದ ಎಲ್ಲರೂ ಈಗಿನ ಬೆಳವಣಿಗೆಗಳಿಂದ ಭ್ರಮನಿರಸನರಾಗಿದ್ದಾರೆ. ಬೆಳೆಯುತ್ತಿರುವ ಸಾಮೂಹಿಕ ಪ್ರತಿಭಟನೆಗಳು ಬಂಗಾಳದ ಭಾರಿ ಸಂಖ್ಯೆಯ ಜನವಿಭಾಗವನ್ನು ಸೆಳೆಯುತ್ತಿವೆ, ಪೋಲಿಸ್ ದಾಳಿಗಳನ್ನು ಧೈರ್ಯದಿಂದ ಎದುರಿಸುತ್ತಿದ್ದಾರೆ ಮತ್ತು ನೀತಿಗೆಟ್ಟ ದುರಾಡಳಿತ ಹಾಗೂ ಅಪರಾಧ–ಭ್ರಷ್ಟಾಚಾರದ ನಂಟನ್ನು ಕೊನೆಗಾಣಿಸಲು ಹೋರಾಟಗಳನ್ನು ತೀವ್ರಗೊಳಿಸುತ್ತಿದ್ದಾರೆ; ಅದೇ ಸಮಯದಲ್ಲಿ ಬಿಜೆಪಿ ಮತ್ತು ಕೋಮುವಾದಿ ಶಕ್ತಿಗಳನ್ನು ದೃಢವಾಗಿ ವಿರೋಧಿಸುತ್ತಿದ್ದಾರೆ ಮತ್ತು ಮೂಲೆಗುಂಪು ಮಾಡುತ್ತಿದ್ದಾರೆ.

**ತ್ರಿಪುರಾ**

ಪಕ್ಷದ ಪ್ರಧಾನ ಕಾರ್ಯದರ್ಶಿ ಹಾಗೂ ಪ್ರಕಾಶ್ ಕಾರಟ್ ಅವರಿಬ್ಬರೂ ಭಾಗವಹಿಸಿದ್ದ ತ್ರಿಪುರಾದ ಪಕ್ಷದ ಕಾರ್ಯದರ್ಶಿ ಮಂಡಳಿ ಮತ್ತು ರಾಜ್ಯ ಸಮಿತಿಯ ವರದಿಯನ್ನುಹಿಂದಿನ ಕೇಂದ್ರ ಸಮಿತಿ ಸಭೆಯು ಚರ್ಚೆ ಮಾಡಿದೆ. ಅವರಿಬ್ಬರೂ ಮತ್ತೆ ಆಗಸ್ಟ್‌ನಲ್ಲಿ ಈ ಸಭೆಗಳಲ್ಲಿ ಭಾಗವಹಿಸಿದ್ದರು ಮತ್ತು ಪ್ರಧಾನ ಕಾರ್ಯದರ್ಶಿಯವರು ಅಕ್ಟೋಬರ್ 20 ರ ಕಾರ್ಯದರ್ಶಿ ಮಂಡಳಿ ಸಭೆಯಲ್ಲಿ ಭಾಗವಹಿಸಿದ್ದರು. ರಾಜ್ಯದಲ್ಲಿ ಪಕ್ಷವು ತನ್ನ ಸ್ವತಂತ್ರ ಚಟುವಟಿಕೆಗಳನ್ನು ಬಲಪಡಿಸಬೇಕಾದ ಅಗತ್ಯವಿದೆ ಮತ್ತು ದುರ್ಗಾ ಪೂಜೆ ಹಬ್ಬದ ಆಚರಣೆಗಳ ನಂತರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಕಳೆದ ಕೇಂದ್ರ ಸಮಿತಿ ಸಭೆಯು ತೀರ್ಮಾನಿಸಿತ್ತು.

ಆಗಸ್ಟ್ ಮತ್ತು ಸೆಪ್ಟೆಂಬರ್ ನಲ್ಲಿ ಎರಡು ತಿಂಗಳುಗಳ ದೀರ್ಘ ಆಂದೋಲನವನ್ನು ಕೈಗೊಳ್ಳಲಾಗಿದೆ. 200 ಕ್ಕೂ ಹೆಚ್ಚು ಚಟುವಟಿಕೆಗಳು ನಡೆದು ಅದರಲ್ಲಿ ರಾಜ್ಯಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಈ ಹಿಂದೆ ಚಟುವಟಿಕೆಗಳು ಸಾಧ್ಯವಾಗದಿದ್ದ ಕೆಲವು ಪ್ರದೇಶಗಳಲ್ಲಿಯೂ ಆಳುವ ಪಕ್ಷದ ಹಾಗೂ ಬಿಜೆಪಿಯವರ ಕಿರುಕುಳಗಳು ಹಾಗೂ ದಾಳಿಗಳನ್ನು ಹಿಮ್ಮೆಟ್ಟಿಸುವ ಮೂಲಕ ಕಾರ್ಯಕ್ರಮಗಳು ನಡೆದಿವೆ.

2023 ರ ಮಾರ್ಚ್‌ನಲ್ಲಿ ರಾಜ್ಯದ ವಿಧಾನ ಸಭೆಗೆ ಚುನಾವಣೆಗಳು ನಡೆಯಬೇಕಿದೆ. 2023 ರ ಜನವರಿ 5 ರಂದು ಚುನಾವಣಾ ಮತದಾರರ ಪಟ್ಟಿ ಅಂತಿಮವಾಗಿ ಪರಿಷ್ಕೃತಗೊಳ್ಳಬೇಕಿದೆ.

60 ವಾಹನಗಳಲ್ಲಿ ಅಗರ್ತಲಾಗೆ ಬರುತ್ತಿದ್ದವರಿಗೆ ಬಿಜೆಪಿ ಪುಂಡರಿಂದ ಅಡಚಣೆಗಳಿದ್ದಾಗ್ಯೂ, ಅಕ್ಟೋಬರ್ 21 ರಂದು ಅಗರ್ತಲಾದಲ್ಲಿ ಪಕ್ಷದ ಭಾರಿ ಬಹಿರಂಗ ಸಭೆ ನಡೆದಿದೆ. ಬಹಿರಂಗ ಸಭೆಯಲ್ಲಿ ಭಾಗವಹಿಸಲು ಬರುತ್ತಿರುವಾಗ ಮತ್ತು ಹಿಂತಿರುಗುವಾಗ ಕೂಡ ಪಕ್ಷದ ಕಾರ್ಯಕರ್ತರು ಆ ದಾಳಿಗಳಿಂದ ಗಾಯಗೊಂಡಿದ್ದಾರೆ. ಇವೆಲ್ಲವುಗಳ ನಡುವೆಯೂ ಸುಮಾರು 40,000 ಜನರು ಬಹಿರಂಗ ಸಭೆಯಲ್ಲಿ ಪಾಲ್ಗೊಂಡಿದ್ದರು; ಅದು ನಿಜಕ್ಕೂ ಬಲ ಪ್ರದರ್ಶನದ ಒಂದು ಪ್ರಭಾವಶಾಲಿ ಸಭೆಯಾಗಿದ್ದು ಪಕ್ಷದ ಕಾರ್ಯಕರ್ತರಲ್ಲಿ ಹಾಗೂ ಜನರಲ್ಲಿ ಒಂದು ಆತ್ಮವಿಶ್ವಾಸವನ್ನು ಮೂಡಿಸಿದೆ.

ಬಿಜೆಪಿ ಮತ್ತದರ ರಾಜ್ಯ ಸರ್ಕಾರವು ಹರಿಬಿಟ್ಟ ಭಯೋತ್ಪಾದಕತೆಯನ್ನು ಹಿಮ್ಮೆಟ್ಟಿಸಲು ಮತ್ತು ಪ್ರಜಾಪ್ರಭುತ್ವ ಹಾಗೂ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಗಳನ್ನು ಒಗ್ಗೂಡಿ ಖಂಡಿಸಲು ಜಾತ್ಯತೀತ ವಿರೋಧ ಪಕ್ಷಗಳನ್ನು ಅಣಿನೆರೆಸುವ ಪ್ರಯತ್ನಗಳನ್ನು ಮಾಡಬೇಕು.

**ಮುಂಬರುವ ವಿಧಾನ ಸಭಾ ಚುನಾವಣೆಗಳು**

ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್‌ನಲ್ಲಿನ ಅವ್ಯವಸ್ಥೆಯ ಕಾರಣ ಹಿಮಾಚಲ ಪ್ರದೇಶ ಹಾಗೂ ಗುಜರಾತ್ ಚುನಾವಣೆಗಳಲ್ಲಿ ಬಿಜೆಪಿಗೆ ಅನುಕೂಲಕರ ಪರಿಸ್ಥಿತಿ ಇದೆ. ಎರಡೂ ರಾಜ್ಯಗಳಲ್ಲಿ ಆಡಳಿತಾರೂಢ ಬಿಜೆಪಿಯು ಬಹಳ ದೊಡ್ಡ ರೀತಿಯ ಸರ್ಕಾರ ವಿರೋಧಿ ಮನೋಭಾವವನ್ನು ಎದುರಿಸುತ್ತಿದೆ. ಆದರೆ ಅದು ಜಾತ್ಯತೀತ ಶಕ್ತಿಗಳ ಅನೈಕ್ಯತೆಯಿಂದಾಗಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಮೋದಿಯವರು ಎರಡೂ ರಾಜ್ಯಗಳಲ್ಲಿ ತಮ್ಮ ಚುನಾವಣಾ ಪ್ರಚಾರವನ್ನು ಆರಂಭಿಸಿದ್ದಾರೆ, ಕೋಮು ಧ್ರುವೀಕರಣದ ತೀವ್ರತೆಗೆ ಹೆಚ್ಚಿನ ಗಮನ ಕೊಡುತ್ತಾ ಮತ್ತು ಕೇಂದ್ರ ಸರ್ಕಾರದ ಬೊಕ್ಕಸವನ್ನು ದುರ್ಬಳಕೆ ಮಾಡಿ ಜನರಿಗೆ ಕೊಡುಗೆಗಳನ್ನು ಘೋಷಿಸುತ್ತಿದ್ದಾರೆ. ಗುಜರಾತ್ ಚುನಾವಣೆಯ ಘೋಷಣೆಯನ್ನು ಚುನಾವಣಾ ಆಯೋಗವು ನಿಧಾನ ಮಾಡುವ ಮೂಲಕ ಮೋದಿಯವರು ಗುಜರಾತಿನಲ್ಲಿ ಅಲ್ಲಿಯ ಸರ್ಕಾರದ ಹಣ ಬಳಸಿ ಜನರಿಗೆ 'ವೈಯಕ್ತಿಕ ಬಹುಮಾನ'ಗಳನ್ನು ಪ್ರಕಟಿಸುತ್ತಿದ್ದಾರೆ.

ಎರಡೂ ರಾಜ್ಯಗಳಲ್ಲಿ ಎಎಪಿಯು ತನ್ನ ಅಭ್ಯರ್ಥಿಗಳನ್ನು ಸ್ಪರ್ಧೆಗಿಳಿಸಿದೆ. ಹಿಮಾಚಲದಲ್ಲಿ ಅದು ಹೆಚ್ಚು ಒಳನುಗ್ಗಲು ಸಾಧ್ಯವಾಗದಿರುವಾಗಲೇ, ಗುಜರಾತಿನ ಪಟ್ಟಣ ಪ್ರದೇಶಗಳಲ್ಲಿ ಕೆಲವು ಪರಿಣಾಮ ಬೀರಬಹುದು.

ಸಿಪಿಐ(ಎಂ) ರಾಜ್ಯ ಸಮಿತಿಗಳು ಇತರ ಎಡ ಪಕ್ಷಗಳೊಂದಿಗೆ, ಬಹು ಮುಖ್ಯವಾಗಿ ಸಿಪಿಐನೊಂದಿಗೆ ಕೆಲವು ಸ್ಥಾನಗಳಲ್ಲಿ ಹೊಂದಾಣಿಕೆಯೊಂದಿಗೆ ಸ್ವತಂತ್ರವಾಗಿ ಸ್ಪರ್ಧಿಸುವುದೆಂದು ತೀರ್ಮಾನಿಸಿವೆ. ಸಿಪಿಐ(ಎಂ) ಹಿಮಾಚಲ ಪ್ರದೇಶದಲ್ಲಿ 11 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಗುಜರಾತಿನಲ್ಲಿ ಚುನಾವಣಾ ವೇಳಾ ಪಟ್ಟಿ ಇನ್ನೂ ಪ್ರಕಟವಾಗಿಲ್ಲದ ಕಾರಣ ಇತರ ಜಾತ್ಯತೀತ ವಿರೋಧ ಶಕ್ತಿಗಳೊಂದಿಗೆ ಮಾತುಕತೆ ಮುಂದುವರಿದಿದೆ.

**ಕೇಂದ್ರ ಸಮಿತಿಯ ಕರೆಗಳು**

ಎಲ್ಲಾ ಪ್ರಮುಖ ಸಾಮೂಹಿಕ ಸಂಘಟನೆಗಳು ಅಖಿಲ ಭಾರತ ಸಮ್ಮೇಳನಗಳನ್ನು ನಡೆಸುವ ಪ್ರಕ್ರಿಯೆಯಲ್ಲಿ ತೊಡಗಿವೆ. ಈ ಸಂದರ್ಭದಲ್ಲಿ, ಕಾಲಬದ್ಧವಾದ ಅಖಿಲ ಭಾರತ ಕಾರ್ಯಾಚರಣೆಯ ಕರೆಗಳನ್ನು ನೀಡುವುದು ಕಾರ್ಯಸಾಧುವಲ್ಲ.

ಜನರ ಜೀವನೋಪಾಯಗಳ ಮೇಲೆ ಹೆಚ್ಚುತ್ತಿರುವ ಹೊರೆಗಳು, ತೀವ್ರವಾಗುತ್ತಿರುವ ದಲಿತರು, ಮಹಿಳೆಯರು ಹಾಗೂ ಅಂಚಿನಲ್ಲಿರುವ ಜನರ ಮೇಲಿನ ದಾಳಿಗಳ ವಿರುದ್ಧ, ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮತ್ತು ಪ್ರಜಾಸತ್ತಾತ್ಮಕ ಹಕ್ಕುಗಳು ಹಾಗೂ ನಾಗರಿಕ ಸ್ವಾತಂತ್ರ್ಯದ ಮೇಲಿನ ದಾಳಿಗಳ ವಿರುದ್ಧ ಸ್ಥಳೀಯ ಹೋರಾಟಗಳನ್ನು ಮತ್ತು ಪ್ರತಿಭಟನಾ ಕಾರ್ಯಾಚರಣೆಗಳನ್ನು ಪಕ್ಷವು ಬಲಪಡಿಸಬೇಕು;

ಕಾರ್ಮಿಕ ಸಂಘಗಳು, ಕಿಸಾನ್ ಸಭಾಗಳು ಹಾಗೂ ಕೃಷಿ ಕೂಲಿಗಾರರ ಸಂಘಗಳು ಜನರ ಮೇಲೆ ಹೊರಿಸುತ್ತಿರುವ ಕಷ್ಟಕಾರ್ಪಣ್ಯಗಳ ವಿರುದ್ಧ 14 ಅಂಶಗಳ ಹಕ್ಕೊತ್ತಾಯಗಳ ಪಟ್ಟಿಯೊಂದಿಗೆ ಏಪ್ರಿಲ್ 2023 ರಲ್ಲಿ ಸಂಸತ್ತಿನ ಎದುರು ಕೊನೆಗೊಳ್ಳಲಿರುವ ದೇಶವ್ಯಾಪೀ ಪ್ರತಿಭಟನಾ ಹೋರಾಟಗಳನ್ನು ಪಕ್ಷವು ಬೆಂಬಲಿಸುತ್ತದೆ.

ಜನರ ಯಾತನೆಗಳನ್ನು ಹಾಗೂ ಅವರು ಅನುಭವಿಸುತ್ತಿರುವ ಗೋಳನ್ನು ಸಂಪೂರ್ಣವಾಗಿ ಕಡೆಗಣಿಸಿ ಮೋದಿಯವರು ತಮ್ಮ ಚುನಾವಣಾ ಪ್ರಚಾರದಲ್ಲಿ ಜನರಲ್ಲಿ ಕೋಮು ವಿಭಜನೆಯನ್ನು ತೀವ್ರಗೊಳಿಸುವ ತಮ್ಮ ಎಂದಿನ ಅಸ್ತ್ರವನ್ನು ಬಳಸುತ್ತಿದ್ದಾರೆ. ಭಾರತದ ಆರ್ಥಿಕತೆಯ ದುಃಸ್ಥಿತಿ, ಅವರ ನೀತಿಗಳಿಂದಾಗಿ ಜನರ ಬದುಕು ನಾಶವಾಗುತ್ತಿರುವುದು, ಭಾರತದ ರಾಷ್ಟ್ರೀಯ ಆಸ್ತಿಗಳು ಲೂಟಿಯಾಗುತ್ತಿರುವುದು ಮುಂತಾದ ಯಾವ ಅಂಶಗಳ ಬಗ್ಗೆಯೂ ಮೋದಿಯವರಲ್ಲಿ ಉತ್ತರವಿಲ್ಲದಾಗಿದೆ. ಅವರು ತಮ್ಮ ಭಾಷಣಗಳಲ್ಲಿ ಧಾರ್ಮಿಕ ಸಂಗತಿಗಳಾದ ಬದರಿನಾಥದಲ್ಲಿ ಪೂಜೆ ಮಾಡುವುದು ಮತ್ತು ಅಯೋಧ್ಯಾದಲ್ಲಿ ಜನವರಿ 2024 ಕ್ಕೆ ಮುಂಚೆ ಮಂದಿರ ನಿರ್ಮಾಣ ಮಾಡುವುದರ ಬಗ್ಗೆಯೇ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಇದು ಸ್ಪಷ್ಟವಾಗಿ 2024 ರ ಚುನಾವಣೆಗೆ ಅವರ ಮುಖವಾಡ.

ಈ ಪರಿಸ್ಥಿತಿಯಲ್ಲಿ, ಹಿಂದುತ್ವ ಕೋಮುವಾದಿಯ ಆಕ್ರಮಣವನ್ನು ಹೇಗೆ ಎದುರಿಸುವುದು ಎಂದು ಪಕ್ಷದ 23 ನೇ ಮಹಾಧಿವೇಶನವು ತೀರ್ಮಾನಿಸಿದ ದಿಶೆಯಲ್ಲಿ ಪಕ್ಷವು ಚಟುವಟಿಕೆಗಳನ್ನು ಹಾಗೂ ಮಧ್ಯಪ್ರವೇಶವನ್ನು ಗಂಭೀರವಾಗಿ ಕೈಗೊಳ್ಳಬೇಕಾದ ಅವಶ್ಯಕತೆ ಇದೆ. ಜನರ ಬದುಕನ್ನು ಕಾಡುತ್ತಿರುವ ಸಮಸ್ಯೆಗಳನ್ನು ಹಿಂದಕ್ಕೆ ತಳ್ಳಿ ಅವರ ಗಮನವನ್ನು ಬೇರೆಡೆಗೆ ಸೆಳೆಯಲು ಮತ್ತು 'ಮೇಲೆದ್ದು ಬರುವ ಹಿಂದುತ್ವ ಅಸ್ಮಿತೆಯ' ಮೂಲಕ ಹಿಂದುತ್ವ ಕೋಮುವಾದಿ ವೋಟ್ ಬ್ಯಾಂಕನ್ನು ಕ್ರೋಢೀಕರಿಸುವ ಅವರ ತಂತ್ರವನ್ನು ತಡೆಯುವ ಸಲುವಾಗಿ ರಾಜಕೀಯ ನಿರ್ಣಯದಲ್ಲಿ ವಿವರಿಸಿದಂತೆ ಕ್ರಮಗಳನ್ನು ಗಂಭೀರವಾಗಿ ಜಾರಿ ಮಾಡಬೇಕಿದೆ.

******